ಕೊರವಂಜಿ



Koravanji

ಜನವರಿ ೧೯೪೫

ಮಾಸ ಪತ್ರಿಕೆ

ಸಂಪಾದಕರು:
ಶ್ರೀ|| ರಾ. ಶಿ.

ಚಿತ್ರಕಾರರು:
ಶ್ರೀ|| ಆರ್. ಕೆ. ಲಕ್ಷ್ಮಣ್

ಬರಹಗಾರರು:

ಶ್ರೀ|| ಕೇಸ್ವ
ಶ್ರೀ|| ಶಿವಯ್ಯ
ಶ್ರೀ ಎ. ಸ್ವಂ.
ಶ್ರೀ|| ಹಾಲಾಳಿ
ಶ್ರೀ|| ಅಚಾರಿ
ಶ್ರೀ|| ಡಿ. ಎಸ್. ಸೀ.
ಶ್ರೀ|| ಸಾರಾಂಶ
ಶ್ರೀ|| ಬಿ. ವಿ. ಸು.

ಬಿಡಿ ಪ್ರತಿಗೆ -- ಕೇವಲ ಎರಡಾಣೆ

ತಿಳಿನಗೆಯ ಮಾಸ ಪತ್ರಿಕೆ.

ಕೊ ರ ವಂ ಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ, ಬಹಳ ಸಹಾಯ ಮಾಡಿದಂತಾಗುವುದು.

ವಿ ಷ ಯಾ ನು ಕ್ರ ಮ ಣಿ ಕೆ

ಸಕಲವೂ ಪ್ರಿಯವಾದ

ಸಮರ ಕಾಲದಲ್ಲಿ


- ನಿಮಗೆ ಪ್ರಿಯವಾದ -

"ರಾಜಾ ಸ್ನೋ"

ವನ್ನು ಜಾಗರೂಕತೆಯಿಂದ ಉಪಯೋಗಿಸಿ

ಮಣ್ಯಂ ಮತ್ತು ಕಂಪೆನಿ

ಬೆಂಗಳೂರು, - - ಮದ್ರಾಸು



ಲೋಧ್ರ—ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿಮಾಡುವುದು.

ಅರ್ಕ—ಶ್ರೇಷ್ಠ ಜ್ವರ ನಿವಾರಿಣಿ

ಇಂಫ್ಲೂಯಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು


ಅಮೃತ—ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮ ರೋಗಗಳು ಮುಂತಾದುವನ್ನು ವಾಸಿಮಾಡುವುದು.

ಏಜಂಟರು :

ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.



ಸಂಪುಟ ೩] ಕೊರವಂಜಿ—ಜನವರಿ ೧೯೪೫ [ಸಂಚಿಕೆ ೧೨

ಕುಹಕಿಡಿಗಳು

ಆಗಾ ಖಾನರು ವಜ್ರ ಮಹೋತ್ಸವಕ್ಕೆ ಭಾರತಕ್ಕೆ ಬರುವರಂತೆ.
—ಓಹೋ ! ಇನ್ನೂ ವಜ್ರದ ಬೆಲೆಯು ಬಹಳವಾಗಿ ಏರುತ್ತದೆಯೇನೋ.

✤ ✤ ✤

ಅಂದಮೇಲೆ ಮರದ್‌ಖಾನನ ವಜ್ರಮಹೋತ್ಸವದಲ್ಲಿ
—ಮರವಜ್ರದ ಬೆಲೆ ಏರುತ್ತದೆಯೇ ?

✤ ✤ ✤

ಅಕ್ಕಿ ಬೆಲೆ ಏರಿದೆಯಂತೆ—ಈ ಸುಗ್ಗಿಯಿಂದ—
—ಕ್ಷಯದಾಸ್ಪತ್ರೆಯ ಶಂಕುಸ್ಥಾಪನೆಯೂ ನಡೆಯಿತಂತೆ—
—ಬೆಂಗಳೂರಿನಲ್ಲಿ ವೈದ್ಯರ ಸಮ್ಮೇಳನವೂ ನಡೆಯುವುದಂತೆ—

✤ ✤ ✤

ಮಹಾಚುನಾವಣೆಗಳು ಹತ್ತಿರವಾಗುತ್ತಿವೆಯಂತೆ
—ಹಿಂತುಳಿದ ಪಂಗಡದವರು ಏನುಮಾಡುತ್ತಿದ್ದಾರೊ ?

✤ ✤ ✤

ಮೈಸೂರಿನಲ್ಲಿ ನಾಟ್ಯಮಂಡಲಿಯು ಯಶಸ್ವಿಯಾಗಿ ಕಾರ್ಯಗೈಯುತ್ತಿರುವುದಂತೆ.

—ನಮ್ಮೂರಿನಲ್ಲಿ ಜಾಮಾತೃಮಂಡಲಿಯೂ ಹಾಗೆಯೇ, ಕ್ರಿಸ್‌ಮಸ್ ಹಬ್ಬದಲ್ಲಿ—

✦ ✦ ✦

ರಬಕವಿಯ ಸಮ್ಮೇಳನಕ್ಕೆ ಶ್ರೀ. ಬಸವನಾಳರು ಅಧ್ಯಕ್ಷರು.

—ಸರಿ. ಬಸವನ ಹಿಂದೆ ಬಾಲ ನಾವು, ಕಾಯಾ, ವಾಚಾ, ಮನಸಾ

✦ ✦ ✦

ವೈಸರಾಯರವರು ರಾಜ ವೈದ್ಯಕೀಯಕ್ಕೆ ಇಳಿದಿರುವರಂತೆ.

—ಅಂದಮೇಲೆ ಆಯುರ್ವಧವು ಖಂಡಿತ.

✦ ✦ ✦

ಈಗಿಲ್ಲ, ಆಗೊಲ್ಲ, ಕ್ರಿಪ್ಸು ಹೇಳಿಲ್ಲವೆ,
ಹಾಗಲ್ಲ, ತಪ್ಪು ನಮದಲ್ಲ—ಅಮೆರಿ ಬರಿ
ಮೂಗನೇ ಅಕ್ಕು, ಸರ್ವಜ್ಞ

✦ ✦ ✦

ಮಲ್ಲೇಶ್ವರಕ್ಕೆ ಹೋದರೂ, ಕಲ್ಲೇಶ್ವರನೇ ಗತಿ (ಅನ್ನದಲ್ಲಿ)

✦ ✦ ✦

ಇದು ಕೇಳಿದ್ದರೇನು ?

ಹುಡುಗರಿಬ್ಬರು ಸೋಪಿನ ಗುಳ್ಳೆ ಬಿಡುತ್ತಿದ್ದರಂತೆ. ಮುದುಕನೊಬ್ಬನು ನೋಡಿ, ಇದೇನು ಮಹಾ ಗುಳ್ಳೆಗಳೋ ನಮ್ಮ ಕಾಲದಲ್ಲಿ ಎಂಥಾ ಸೋಪು ಸಿಕ್ಕುತ್ತಿತ್ತು ಎನ್ನುತ್ತೀರಿ ? ಒಂದು ಸಾರಿ ಒಂದು ಗುಳ್ಳೆ ಬಿಟ್ರೆ ಎಷ್ಟು ದೊಡ್ಡದು ಎಷ್ಟು ಗಟ್ಟಿ ಎನ್ನುತ್ತೀರಿ, ಅದರಮೇಲೇ ಕೂತುಕೊಂಡು ಮೂರು ಮೈಲಿ ಹಾರಿದ್ದೆ ನಾನು ಎಂದನಂತೆ.

✦ ✦ ✦

ಬೆಂಗಳೂರಿಂದ ಮಂಗಳೂರಿಗೆಂದು ಹೊರಟ ಬಸ್ಸು, ಬೆಂಗಳೂರಾಚೆ ಕೆಟ್ಟು ಹೋಗಿ ಮಧ್ಯರಸ್ತೆಯಲ್ಲಿ ನಿಂತುಕೊಂಡಿತಂತೆ. ಡ್ರೈವರನು ಜಪ್ಪಯ್ಯ ಎಂದರೂ ಜಗ್ಗಲಿಲ್ಲವಂತೆ. ಆಗ ಹಿಂದಿನಿಂದ ವೇಗವಾಗಿ ಮಿಲಿಟರಿ ಮೈರಾವಣನಂತಿದ್ದ ಲಾರಿಯೊಂದು ಬಂದು ಇದನ್ನು ಗುಮ್ಮಿತಂತೆ. ಆ ವೇಗದಲ್ಲೇ ಬಸ್ಸು ಮಂಗಳೂರು ಸೇರಿತಂತೆ.

ಉರಿಗಾಳು

ಶಾಂತಿ ಸಮ್ಮೇಳನಕಾಲಕ್ಕೆ ಬೇಕಾಗುವ ಯುದ್ಧಸಾಮಗ್ರಿಗಳನ್ನು ಪ್ರಮುಖ ರಾಷ್ಟ್ರಗಳು ಈಗಿನಿಂದಲೇ ಶೇಖರಿಸುತ್ತಿವೆಯಂತೆ.

* * *

"ನಿಷ್ಪಕ್ಷಪಾತವಾದ ವಿಚಾರಣೆಯಿಲ್ಲದೆ ಯಾರನ್ನೂ ನಾನು ಶಿಕ್ಷೆಗೆ ಗುರಿ ಮಾಡುವುದಿಲ್ಲ"........ಇದು ನಮ್ಮ ವೈಸ್ರಾಯರ ಭಾಷಣದಿಂದ ತೆಗೆದ ವಾಕ್ಯವಲ್ಲ. ಜರ್ಮನರಿಗೆ ಐಸನ್‌ಹವರ್ ಹೇಳಿದ್ದು.

* * *

"ಟೋಕಿಯೊ ಬೆಂಕಿಪೊಟ್ಟಣದಂತೆ ಸುಲಭವಾಗಿ ಉರಿಯುವ ಊರಲ್ಲ" ಎಂದೊಬ್ಬರು ಎಚ್ಚರಿಸಿದರು........ ಜಪಾನಿ ಬೆಂಕಿಪೊಟ್ಟಣವನ್ನು ಪ್ರಯೋಗಿಸಿದ್ದವರಿಗೆಲ್ಲ ಈ ವಿಷಯ ಗೊತ್ತೇ ಇತ್ತು.

* * *

"ಎಣ್ಣೆಗಾಗಿ ಪರ್ಷಿಯಾದೇಶದ ಸರ್ಕಾರವನ್ನು ರಷ್ಯಾ ಸರ್ಕಾರ ಒತ್ತಾಯಪಡಿಸುತ್ತಿದೆ" (ಪತ್ರಿಕೆ)........ಹಿಂಡಿದರೆ ತಾನೆ ಎಣ್ಣೆ ಬರುವುದು!

* * *

ಅಮೆರೀ ಕುರುಡೀ ಚಿತ್ರ ಭ್ರಮರೀ ಬುರುಡೀಕೃತಂ
ದೂರೀ ಕರೋತು ತ್ವರಿತಂ! ಟೋರೀಮೆದುಳಪಂಕಜಂ

* * *

"ಪಾಪಮಂಡೂಕ" ಎಂಬ ಕಾದಂಬರಿ ನಿನ್ನೆ ಹೊರಬಿತ್ತು (ಪತ್ರಿಕೆ)... ಆದರೆ, ಅದನ್ನ ಕಿಟಕಿಯಿಂದಾಚೆ ಎಸೆದ ವಾಚಕ ಮಹಾಶಯ ಯಾರೆಂಬುದು ಮಾತ್ರ ಇನ್ನೂ ತಿಳಿದುಬಂದಿಲ್ಲ.

* * *

"ನಮ್ಮ ಸಾಹೇಬರ ಅಳಿಯನಿಗೆ ಕೆಲಸ ಸಿಕ್ಕಿದ್ದನ್ನ ನೆನೆಸಿಕೊಂಡರೆ, ಹೊಟ್ಟೆ ಉರಿಯುತ್ತೆ"........ಸರಿ! ಅಷ್ಟು ನಾದೆ ಉಳಿಯಿತೋ, ಇಲ್ಲವೋ?...

* * *

ಹೋಗೋ ! ಮುಟ್ಠಾಳ ! ' ನಾನು ' ಫುಡ್ ಇನ್ಸ್ಪೆಕ್ಟರಾಗಿರುವಾಗ ಜನಗಳಿಗೆ ಅಕ್ಕಿ ಸಿಗಲಿಲ್ಲ ಅಂದರೆ ಹೇಗೋ ?........ಡಿಪೋದಲ್ಲಿ ಮುಗಿದಿದ್ದರೆ, ನನ್ನ ಮನೆಯಲ್ಲಿರಬೇಕು ನೋಡು, ಬೇಕಾದಷ್ಟು !"

✤ ✤ ✤

ಪರೀಕ್ಷೆಗಳು ಸಮೀಪಿಸಿರುವುದರಿಂದ, ಶಾಲಾ ಕಾಲೇಜುಗಳಲ್ಲಿ ಉಪಾಧ್ಯಾಯರುಗಳು ತಾವು ಹೇಳಿ ಮುಗಿಸದೆ ಇರುವ ಪಾಠಗಳನ್ನು ಮುಗಿಸೇ ಬಿಡುತ್ತೇವೆಂದು ಹುಡುಗರನ್ನು ಹೆದರಿಸುತ್ತಿರುವರಂತೆ.

✤ ✤ ✤

ಬೆಂಗಳೂರು ಹೋಟೆಲುಗಳಲ್ಲಿ ಚಪಾತಿಮಾಡುವ ಅಡಿಗೆಯವರಿಗೆ ನಗರದ ದಂತವೈದ್ಯ ಸಂಘದವರು ಯಾವ ಕಮಿಷನ್ನನ್ನೂ ಕೊಡುತ್ತಿಲ್ಲವಂತೆ.

✤ ✤ ✤

ಈಜಿಪ್ಟನಲ್ಲಿ ಪರೀಕ್ಷೆಗಳಿಗೆ ಕೂಡುವ ವಿದ್ಯಾರ್ಥಿಗಳು ಉತ್ತರ ಬರೆಯುವಾಗ ಬೀಡಿ ಸೇದಬಹುದಂತೆ....ಬತ್ತಿದ ಬುದ್ಧಿಗೆ ಬತ್ತಿ !

✤ ✤ ✤

"ಅಖಿಲ ರಾಷ್ಟ್ರೀಯ ವಿಮಾನ ಸಂಚಾರ ಸಮಿತಿಯಲ್ಲಿ ಇಂಡಿಯಾಗೆ ಸ್ಥಾನ ದೊರೆಯದಿರಲು, ಕ್ಯೂಬಾರಾಷ್ಟ್ರ ತನ್ನ ಪೀಠವನ್ನು ಬಿಟ್ಟುಕೊಟ್ಟು ಮದುಹಪಕಾರಮಾಡಿತು" (ಪತ್ರಿಕೆ) ...ಸದ್ಯಃ, ಬೇವೂರಲು ಜಾಗ ಸಿಕ್ಕಿತಲ್ಲಾ !

✤ ✤ ✤

ಉನ್ನತಾಧಿಕಾರಿಗಳಾಗಿ ಹಲವಾರು ಕ್ರೈಸ್ತರಿದ್ದರೆ, ಅಲ್ಲಿ ಕ್ರಿಸ್‌ಮಸ್ ಕಾರ್ಡುಗಳಿಗೆ ಒಳ್ಳೆಯ ವ್ಯಾಪಾರವಾಗುತ್ತದೆ, ಎಂದು ಒಂದು "ವ್ಯಾಪಾರ ಸಹೋದ್ಯೋಗಿ"ಯಲ್ಲಿ ಬರೆದಿದೆ........ಹೋದರೆ ಒಂದು ಕಾರ್ಡು ; ಬಂದರೆ, ಮುಂದಿನ ವರ್ಷಕ್ಕಾಯಿತು !

✤ ✤ ✤

ಮುಂದಾಲೋಚನೆ

ಯಾವಕೆಲಸ ಮಾಡಬೇಕಾದ್ರೂ ಮುಂದಾಲೋಚನೆ ಇರಬೇಕು. ನಾನು ಒಂದೊಂದು ಕೆಲಸ ಪೂರೈಸುವ ಹೊತ್ತಿಗೂ—ಅಯ್ಯೋ ಹೀಗೆ ಮಾಡಿದ್ದರೆ ಚೆನ್ನಾಗಿತ್ತು—ಅಂತ ಎಷ್ಟೋ ಬಾರಿ ಅನ್ನಿಸುತ್ತೆ. ಎಷ್ಟೋಬಾರಿಯೇನು— ಪ್ರತಿಯೊಂದುಸಾರಿಯೂ ಹಾಗೆಯೇ ಅನ್ನಿಸಿ ಕೈ ಚಿಟಿಕೆ ಹಾಕಿಹಾಕಿ ಆ ಅಭ್ಯಾಸ ನನ್ನಲ್ಲೇ ನೆಲಗೊಂಡು ಬಿಟ್ಟಿದೆ. ಅವಳಂತೂ ಆಗಾಗ—" ನೀವೊಂದು ಐದು ನಿಮಿಷ ಕೈ ಚಿಟಿಕೆ ಹಾಕೋದು ನಿಲ್ಲಿಸಿದರೆ ಈ ಹಾಳು ಯುದ್ಧವೇನಾದರೂ ನಿಲ್ಲುತ್ತೋ ಏನೋ " ಅಂತ ಅನ್ನುತ್ತಿರುತ್ತಾಳೆ. ಅಬ್ಬ, ಈ ಹೆಂಗಸರೇ ಹೀಗೆ. ಅಲ್ಲಾ, ನಾ ಕೈ ಚಿಟಿಕೆ ಹಾಕೋದಕ್ಕೂ ಯುದ್ಧಕ್ಕೂ....... ....

ಹೂ—ಹೋಗಲಿ. ನಾ ಹೇಳ್ತಾ ಇದ್ದದ್ದೇನು? ಹೂ—ಯಾವ ಕೆಲಸ ಮಾಡಬೇಕಾದರೂ ಮುಂದಾಲೋಚನೆ ಇರಬೇಕು. ಎಂಥಾ ಚಿಕ್ಕ ವಿಷಯವಾದರೂ ಮುಂದಾಲೋಚನೆ ಇರಬೇಕು. ಏನೋ ಎಲ್ಲರೂ ಹಾಕ್ಕೋತಾರಲ್ಲಾ ಅಂತ ಒಂದು ಓಪನ್‌ಕಾಲರ್ ಕೋಟು ಹೊಲಿಸಿದರೆ ಅದರೊಳಕ್ಕೆ ಹಾಕೋಕೆ ಒಂದು ಬನೀನು, ಬನೀನಿಗೆ ಗುಂಡಿಗಳು ಇವೆಲ್ಲಾ ಹವಣಿಸೋಕ್ಕೆ ಧೈರ್ಯವಿದ್ದೇ ಹೊಲಿಸಬೇಕು. ಹೀಗೇ ಹಿಂದೆ ನಂಗೊಂದು ಓಪನ್‌ಕಾಲರ್ ಕೋಟು ಹೊಲಿಸಿದರು. ಅದಕ್ಕೊಂದು ಬನೀನು ಹೊಲಿಸೋಕೆ ಒಂದುವಾರ ಕಾಯಬೇಕಾಯ್ತು. ಬನೀನು ಬಂತು. ಅದಕ್ಕೆ ಡಬ್ಬಲ್‌ಕಾಜ ಮಾಡಿದ್ದ ಆ ಬಡಗಿ—ಅಯ್ಯೋ—ಆ ದರ್ಜಿ. ಸರಿ—ಆ ಗುಂಡಿಗಳು ತರೋಕೆ ಇನ್ನೊಂದು ವಾರ ಸತಾಯಿಸಿದರು ನಮ್ಮಪ್ಪ. ಅದೇ ನೋಡಿ ಬಾಯಿ ಮುಚ್ಚಿಕೊಂಡು ಕ್ಲೋಸ್‌ಕಾಲರ್ ಕೋಟು ಹೊಲಿಸಿಕೊಂಡಿದ್ದರೆ ನನ್ನ ಜನಿವಾರದಮೇಲೇ ಕೋಟು ಹಾಕಿದ್ದರೆ ಸಾಕಾಗಿತ್ತೋ! ಸರಿ ಒಂದು ಬನೀನೂ ಇತ್ತು. ಬನೀನಿಗೆ ಗುಂಡಿಗಳೂ ಬಂತು ಅನ್ನಿ. ಅದಕ್ಕೆ ಕಾಲರ್ ಹೇಗಿರಬೇಕು? ಒಂದುವೇಳೆ ಕಾಲರ್ರೇ ಇಲ್ದೆ ಇದ್ರೆ ಏನೋ ಬೋಳು ಬೋಳಾಗಿ ಬಿಂ ಅಂತ ಕಾಣುತ್ತೆ. ಕಾಲರ್ ಇದ್ದು ಗುಂಡಿ ಹಾಕಿದ್ರೆ ಚೆನ್ನಾಗಿ ಕಾಣೊಲ್ಲ—ಟೈ ಹಾಕ್ದೆ ಇದ್ರೆ. ಗುಂಡಿ ಹಾಕ್ದೇ ಹಾಗೇಬಿಟ್ರೆ— ಬ್ರಹ್ಮಕೊಟ್ಟ ನನ್ನೆಲುಬೆಲ್ಲ ಪ್ರಪಂಚಕ್ಕೆ ಕಾಣುತ್ತೆ. ನನ್ನ ಜನಿವಾರದ ಬ್ರಹ್ಮಗಂಟು ಹೊರಗೆ ಕಾಣುತ್ತೆ. ಅವು ಮುಚ್ಚೋಕೆ ಒಂದು ಮಫ್ಲರ್ ಬೇಕು. ಅಂದರೆ ಆ ಮಫ್ಲರ್ ಬರೋದ್ರಲ್ಲಿ ನನ್ನ ಓಪನ್‌ಕಾಲರ್ ಕೋಟು ನಂಗೆ ಚಿಕ್ಕದಾಗಿರುತ್ತೆ. ಇನ್ನದನ್ನ ನನ್ನ ತಮ್ಮನಿಗೆ ಕೊಡೋಣ ಅಂದ್ರೆ— — — ಓಹೋ ನಾ ನಿಮಗೆ ಏನು ಹೇಳೋಕೆ ಹೊರಟೆನೋ ಅದು ಮರೆತೇಹೋಯ್ತು.

ಅದೇ ಮುಂದಾಲೋಚನೆ. ನನ್ನ ರೂಂನಲ್ಲಿ ಒಂದು ಆಂಜನೇಯನ ಪಟ ಇದೆ. ಅವನು ಲಂಕಾಪಟ್ಣಣಾನೆಲ್ಲಾ ಸುಟ್ಟುಬಿಟ್ಟ. ಸುಟ್ಟಾಗ ಅವನ ಮೈ ಮೇಲೆ ಪ್ರಜ್ಞೆಯೇ ಇಲ್ಲ. ಆಮೇಲೆ ತನ್ನಬಾಲದ ಬೆಂಕಿ ಆರಿಸೋವಾಗ ಹೊಳೀತು —ಅಶೋಕವನದಲ್ಲಿದ್ದ ಸೀತಾದೇವಿ ಗತಿಯೇನು ಅಂತ. ಹಾಗೇ ಸಮುದ್ರದಲ್ಲಿ ನಿಂತು ತನ್ನ ಗಲ್ಲದಮೇಲೆ ಅಂಗೈ ಇಟ್ಟು ಯೋಚನೆಮಾಡ್ತಾ ಇದ್ದಾನೆ. ಅದೇ ಆ ಪಟ. ಒಂದ್ಸಾರಿ ಹಲಸಿನ ಹಣ್ಣಿನ ಕಾಲದಲ್ಲಿ ಹೊಟ್ಟೆ ಬಿರಿಯುವಷ್ಟು ತಿಂದು ಮೂರುದಿನ ನರಳಿದಾಗ ನಮ್ಮಪ್ಪ ನನ್ನ ರೂಂನಲ್ಲಿ ಆ ಪಟ ತಂದುಹಾಕಿ "ನೋಡು ಇದಾದ್ರೂ. ಅಂಥಾ ಮಹಾಸುಭಾವ ಆಂಜನೇಯ ಮುಂದಾಲೋಚನೆ ಇಲ್ದೆ ಕೆಲಸಮಾಡಿ ಆಮೇಲೆ ಪಶ್ಚಾತ್ತಾಪ ಪಡೋದನ್ನ. ಇದನ್ನಾದ್ರೂ ನೋಡಿ ನಿಂಗೆ ಬುದ್ಧಿ ಬರ್ಲಿ" ಅಂದ್ರು. "ಅಂಥ ಆಂಜನೇಯನಿಗೇ ಬುದ್ಧಿ ಮಂಕಾದಮೇಲೆ ನಂಗೆಲ್ಲಿಂದ ಬರುತ್ತೆ?" ಅಂದೆ. ಅದಾದಮೇಲೆ ಎರಡುದಿನ ಮಲಗಬೇಕಾಯಿತು. ಅಲ್ಲಾ, ಮುದಲ ಸೀತಾದೇವಿಗೇನಾದ್ರೂ ಆ ಬೆಂಕಿಯಿಂದ ಜಖಂ ಆಗಿದ್ದಿದ್ರೆ ಆಂಜನೇಯನ ಗತಿ ಏನಾಗೋದೂ ಅಂತ! ಹಿಂದೆ ನಮ್ಮಣ್ಣ ಬಾಯ್ನಲ್ಲಿ ಸಿಗರೇಟು ಇಟ್ಕೊಂಡು ನಮ್ಮತ್ತಿಗೇನ ಹೆಚ್ಚು ಅಂತಿದ್ರು. ಒಂದ್ಸಾರಿ ನಮ್ಮತ್ತಿಗೆ ಎಲ್ಲೋ ನೋಡ್ಕೊಂಡು ನಮ್ಮಣ್ಣನ ಮೀಸೇಗೆ ಬೆಂಕಿ ಹಿಡಿಯೋದ್ರಲ್ಲಿದ್ರು. ಅಷ್ಟಕ್ಕೇ ನಮ್ಮಣ್ಣ—ಇನ್ನುಮೇಲೆ ಬೆಂಕಿಕಡ್ಡಿ ಮುಟ ಬೇಡ ಅಂತ ಏನು ರಾದ್ಧಾಂತಕ ಮಾಡಿಬಿಟ್ರು! ಇನ್ನು ಆ ರಾಮದೇವರು ಆಂಜನೇಯನ್ನ ಸುಮ್ಮನೆ ಬಿಡ್ತಾ ಇದ್ರೆ? ಆಂಜನೇಯನಿರಲಿ, ಅವನನ್ನ ಗುರುತಮಾಡಿಸಿದರಲ್ಲಾ ವಾಲಿ ಸುಗ್ರೀವರು—ಅವರಗತಿ - - - !

ಇವೆಲ್ಲಾ ಏಕೆ ಬಂತು ವಿಷಯ? ಹೂ— ಮುಂದಾಲೋಚನೆ ಸಮಾಚಾರ ಅಲ್ವೇ? ನಿಮಗೆ ಏಕೆ ಹೇಳ್ತೀ ಅಂದ್ರೆ—ಹೋದ ತಿಂಗಳು ನೆಂಪಕ್ಕದ ಮನೆ ಸುಬ್ಬಯ್ಯನವರಿಗೆ ವರ್ಗವಾಯಿತು. ಆಗ ಅವರ ಹತ್ತಿರ ಇದ್ದ ಗ್ರಾಮಫೋನು ಮಾರಿಬಿಟ್ರು. ನನ್ನಾಕೆ ನನ್ನ ಪೀಡಿಸಿ "ಬಹಳ ಅಗ್ಗ ಅಂದ್ರೆ, ಈಗೆಲ್ಲೂ ಸಿಗೊಲ್ಲಾ. ಬಹಳ ಚೆನ್ನಾಗಿದೆ" ಅಂತ ಹೇಳಿ - - ಅರವತ್ತು ರೂಪಾಯಿಗೆ ಆ ಗ್ರಾಮಫೋನು, ಐದು ನಾಟಕದ ಸೆಟ್ಟು ಇವೆಲ್ಲಾ ಕೊಂಡುಕೊಂಡೆ. ಸರಿ—ತಕೊಂಡ ಐದು ದಿನಗಳ ತನಕ ಆ ನಾಟಕಗಳನ್ನೆಲ್ಲಾ ಒಂದೊಂದಾಗಿ ಹಾಕಿ ಕೇಳಿದೆವು. ಅದೇನು ಆ ನಿದ್ದೆ ಕೆಟ್ಟಿದ್ದರಿಂದಲೋ ಏನೋ, ನಾನೂ ಅವಳೂ ಇಬ್ಬರೂ ಹಾಸಿಗೆ ಹಿಡಿದೆವು. ನಮ್ಮತ್ತೆ ನಮ್ಮ ಶುಶ್ರೂಷೆಗೆ ಬರಬೇಕಾಯ್ತು. ಇವೆಲ್ಲಾ ಮುಗಿಯೋ ಹೊತ್ತಿಗೆ, ಹೋಗಲಿ ಅಂತ ಎರಡು ಹೊಸ ಪ್ಲೇಟು ತಂದೆ. ಇನ್ನೂ ಮೊದಲ್ನೇ ಪ್ಲೇಟ್ ಹಾಕಿ ವೈಂಡ್ ಮಾಡ್ತಾ ಇದ್ದೇನೆ—ಮಿಷನ್ ಒಳಗೆ ಢಮ ಅಂತ ಶಬ್ದವಾಯಿತು. ಕಡೆಗೆ ಗ್ರಾಮಫೋನು ಮೇಲುಸಿರು ಬಿಡಿತು. ಇನ್ನದರ ರಿಪೇರಿ—ಒಂದೊಂದಾಗಿ ಎಲ್ಲಾ ಭಾಗವೂ ರಿಪೇರಿಯಾದಮೇಲೆ ನಾನು ಮೊದಲು ಕೊಂಡ ಮಾಲಿನಲ್ಲಿ ಮುಚ್ಚಳ ಒಂದೇ ಇದ್ದಿದ್ದರಲ್ಲಿ ಸರಿಯಾಗಿದ್ದದು. ಅದರಲ್ಲಿ ಎರಡು ಮೊಳೆಗಳು

ಮಾತ್ರ ಹೋಗಿತ್ತು. ಬಾಕಿ ಸಾಮಾನಿನಲ್ಲಿ— ಇದು ಗ್ರಾಮಾಫೋನಿಂದು—ಇದು ಗ್ರಾಮಾಫೋನಿಂದಲ್ಲ ಅಂತ ಹೇಳುವುದಕ್ಕೆ ಕೂಡ ಆಗಲಿಲ್ಲ ಆ ರಿಪೇರಿಮಾಡು ವವನಿಗೆ. ಕೆಲವು ಬೈಸಿಕಲ್ ಸಾಮಾನೆಂದೂ, ಕೆಲವು ಕೊಳಾಯಿ ಸಾಮಾನೆಂದೂ, ಇನ್ನೂ ಕೆಲವು ಪ್ರಾಯಶಃ ರೈಲ್ವೇ ಎಂಜಿನ್ ಅಥವಾ ಏರೋಪ್ಲೇನಿಂದಿರಬೇಕೆಂದೂ ಸಂಶಯಪಟ್ಟ. ಯಾರ್‍ಯಾರೋ ಬಂದು ನೋಡಿಕೊಂಡು ಹೋದರು. ಯಾರೂ ಹೇಳುವುದಕ್ಕಾಗಲಿಲ್ಲ.

ನಾನು ಎಲ್ಲಾ ಲೆಖ್ಖಹಾಕಿ ನೋಡಿದೆ. ಆ ಗ್ರಾಮಫೋನಿನ ಖರೀದಿ ಪಟ್ಟಿ ಕೆಳಗೆ ಕೊಟ್ಟಿದ್ದೇನೆ:—

ಖರೀದಿ ಪಟ್ಟಿ

ಕೊಂಡುಕೊಂಡ ಬೆಲೆ	....	60	0	0
ರಜದಲ್ಲಿ ಕಳೆಕೊಂಡ ಸಂಬಳ	....	22	0	0
ಡಾಕ್ಟರ್—ಔಷಧಿ ವಗೈರೆ	....	45	0	0
ಅತ್ತೆ ಬರುವುದಕ್ಕೆ ಛಾರ್ಜು	....	3	8	0
ಅವರ ಒಂದು ತಿಂಗಳ ಖರ್ಚು (ಸುಮಾರು)	....	30	0	0
ಅವರು ಊರಿಗೆ ಹೋಗುವಾಗ ಕೊಟ್ಟ ಸೀರೆ ವಗೈರೆ		27	0	0
ಮತ್ತೆ ಅವರ ಛಾರ್ಜು	....	3	8	0
ಗ್ರಾಮಫೋನು ರಿಪೇರಿ	....	48	0	0
ಎರಡು ಪ್ಲೇಟು	....	6	0	0
ಒಟ್ಟು	....	245	0	0

ವಿಚಾರಿಸಿದ್ದರಲ್ಲಿ ಈ ಹಣಕ್ಕೆ ಒಂದು ಹೊಸ ಗ್ರಾಮಫೋನ್, ಮೂವತ್ತು ಕೇಳಬಹುದಾದ ಹೊಸ ಪ್ಲೇಟುಗಳು ಸಿಗುತ್ತಿತ್ತು. ನಮ್ಮತ್ತೇನೂ ಬರದೆ ಸುಖವಾಗಿರುತ್ತಿದ್ದೆವು.

—ಕೇಫ.

ಸೂಪರ್‌—ಸರ್ವಜ್ಞನ

ಹೂ ಬಾಣಗಳು

೧

ಏನಯ್ಯ ! ನೀ ಬರಲು ಇಷ್ಟು ಲೇಟೆಂದೆನಲು
‘ ಮನೆಯಲ್ಲಿ ಹೊಡೆವೆ ತುಸು ನಿದ್ದೆ !’—ಕ್ಲಾರ್ಕಿಗೆ
ಮನೆ ಬೇಕೆ ಇದಕೆ ?—ಸರ್ವಜ್ಞ

೨

“ ಈರುಳ್ಳಿ ಎಂಟು ಸೇರೆಷ್ಟು ಭಾರಿಯುಗಂಟು ?”
“ ಹಿರಿಗಂಟು ಕೊಳ್ವಾಗ, ನಮಗೆ—ಸಂತೆಯಲಿ
ಕಿರುಗಂಟು, ಮಾರೆ !”—ಸರ್ವಜ್ಞ

೩

“ ಈರ ! ಲೋ ! ಗಿಡಗಳಿಗೆ ಏಕೆ ನೀರ್ಬಿಡಲಿಲ್ಲ ?”
“ ಪೂರ ಮಳೆ ಬೀಳುತಿದೆ ” “ ದಡ್ಡ !—ಕೊಡೆಹಿಡಿದು,
ನೀರೆರೆಯೊ, ಬೇಗ ”—ಸರ್ವಜ್ಞ

೪

“ ಈ ಹೋಟಲಲಿ, ಏನ್ರಿ, ಸಭ್ಯರಾದವರುಂಟೆ ?”
“ ಓಹೊ, ಅದಕೇಕೆ ಬೆದರುವಿರಿ— ನೀವು ಬರ
ಬಹುದೆಂ”ದಂವರು— ಸರ್ವಜ್ಞ

೫

“ ಕಣ್ಗಳಿರುವನ್ನೆಗಂ ಕನ್ನಡಕ ಸಾಕದುವೆ ”
ಎಂದು ನೀವಂದಿರೀ, ಪಾಪ,—ತಿಂಗಳಲಿ
ಕಣ್ಣೆ ಕುರುಡಕಟ,—ಸರ್ವಜ್ಞ

೬

“ ರೀ ! ನಿಮ್ಮನೀಗೊಂದು ಶನಿಯು ಬೆನ್‌ಹತ್ತಿದೆ ”
ಈರೀತಿ ಗಂಡನಿಗೆ ನುಡಿಯೆ—ಜೋಯಿಸರು,
ಚೀರಿ ಶಪಿಸಿದಳು—ಸರ್ವಜ್ಞ



“ ....ನೋಡೋದಕ್ಕೆ ಕುಳ್ಳಗೆ ದಪ್ಪಗೆ, ಮೀಸೆ ಬಿಟ್ಕೊಂಡು, ಕನ್ನಡಕ ಹಾಕ್ಕೊಂಡು, ಪೇಟಾನ ಒಂದು ವಿಚಿತ್ರವಾಗಿ ಕಟ್ಕೊಂಡು, ಛತ್ರಿ ಹಿಟ್ಕೊಂಡು ರಂಗರಾಯರು ಅನ್ನೋವ್ರೆ ನೀವು ?........ಹಾಗಾದರೆ ನಮ್ಮ ತಂದೆ ಮನೆಲಿಲ್ಲ...... ....

ಸಾಂಕ್ರಾಮಿಕ

" ನಿನಗೆ ಜ್ಞಾಪಕ ಇದೆಯೋ, ೧೯೧೮ ರಲ್ಲಿ ಒಂದೇ ದಿನದಲ್ಲಿ ಬೆಂಗಳೂರಲ್ಲಿ ೩೬೫ ಜನ ಸತ್ತಿದ್ದು ?"

" ಇಲ್ಲದೇ ಉಂಟೆ ! ಸಿದ್ಧ ಕಟ್ಟೆಯವರ ಸುಗ್ಗಿಯೋ ಸುಗ್ಗಿ "

" ಆದರೆ ಎಷ್ಟು ಅಂತ ಅವರುತಾನೇ ದುಡಿದಾರೊ !"

" ದುಡಿದರಲ್ಲೊ, ಇಬ್ಬಿಬ್ಬರೇ ಸಾಗಿಸುತ್ತಿದ್ದರಲ್ಲೊ, ದಿನಕ್ಕೆ ಏಳು ಎಂಟು ಸಾಗಿಸುತ್ತಿದ್ದರಲ್ಲೊ "

" ಆದರೂ ಅವರ್‍ಯಾರೂ ಖಾಯಿಲೆ ಬೀಳಲಿಲ್ಲವಲ್ಲ !"

" ಅದೇ ದೇವರ ಮಾಯೆ ಕಣೊ "

ಈರೀತಿ ಸಂಭಾಷಣೆ ಯುವಕರಿಬ್ಬರಲ್ಲಿ ನಡೆಯುತ್ತಿತ್ತು. ಕಳೆದ ಮಹಾ ಯುದ್ಧದ ತರುಣದಲ್ಲೇ ಬಂದ ಸಾಂಕ್ರಾಮಿಕ ಜಾಡ್ಯದ ದಿನಗಳನ್ನು, ಆಗ್ಗೆ ಹುಡುಗರಾಗಿದ್ದು ಈಗ ಮಧ್ಯವಯಸ್ಸಿನ ಮುದುಕರಾದ ತರುಣರು ಮಾತನಾಡಿ ಕೊಳ್ಳುತ್ತಿದ್ದರು, ಊರಾಚೆ ರಸ್ತೆಯ ಪಕ್ಕದಲ್ಲಿದ್ದ ಸಣ್ಣ ಗುಡ್ಡ ಒಂದರಮೇಲೆ ಕುಳಿತು.

ಗಾಳಿ ಸವಾರಿಗೆಂದು ಹೋಗುತ್ತಿದ್ದಾಗ ಈ ಮಾತುಗಳು ನನಗೆ ಕೇಳಿಬಂತು.

ಮನೆಗೆ ಬಂದಮೇಲೆ ಊಟಮಾಡುವವೇಳೆಗೆ ತಿರುಗಿ ಈ ವಿಷಯವು ಜ್ಞಾಪಕಕ್ಕೆ ಬಂತು. ಊಟ ಮುಗಿಸಿ ದಿನಪತ್ರಿಕೆ ಓದುವಾಗ ಸಾಂಕ್ರಾಮಿಕ ಶಾಸ್ತ್ರಜ್ಞರ ಭವಿಷ್ಯವು ಕಂಡುಬಂತು. ಅವರ ಭವಿಷ್ಯದಂತೆ ಸುಮಾರು ೨೦—೨೫ ವರ್ಷಗಳಿಗೊಮ್ಮೆ, ಕೆಲವುವೇಳೆ ೪೦ ವರ್ಷಗಳಿಗೊಮ್ಮೆ, ಸಾಂಕ್ರಾಮಿಕ ಜಾಡ್ಯವು ಇಡೀ ಲೋಕದಲ್ಲೆಲ್ಲಾ ಹರಡುವುದೆಂದೂ, ಪ್ರಾಯಶಃ ಯುದ್ಧದಾನಂತರವೇ ತಲೆ ದೋರುವುದೆಂದೂ, ಬಳಲಿ ಕೊಳಲಿದ ಜನರನ್ನೆಲ್ಲಾ ಹೆಚ್ಚುಹೆಚ್ಚಾಗಿ ನಿರ್ಮೂಲ ಮಾಡುವುದೆಂದೂ ಒರೆಯಲ್ಪಟ್ಟಿತ್ತು.

ಆ ಯುದ್ಧದನಂತರ ಬಂದ ಇನ್‌ಫ್ಲೂಯೆನ್ಸಾ ಮಾರಿಯು 'ಸಾಕಷ್ಟು ಜನರನ್ನು ಸಾಗಿಸಿತು. ಅದಕ್ಕಿಂತಲೂ ವಿಶ್ವವ್ಯಾಪಿಯಾದ ಯುದ್ಧ ಈಗಿನದು. ಜನರು ಈಗ ಇನ್ನೂ ಹೆಚ್ಚಾಗಿ ಕೊಳಲಿ ಬಳಲಿರುವರು. ಅಂದಮೇಲೆ ಈ ಸಾರಿ ಹಿರಿಯ ಸಾಂಕ್ರಾಮಿಕ ಜಾಡ್ಯ ಬಂದದ್ದೇ ಆದರೆ, ಅನಿಷ್ಟ ಪರಂಪರೆಗಳು ಹೆಚ್ಚಾಗಲೇ ಬೇಕು. ಸದ್ಯದಲ್ಲೇ ಯುದ್ಧವು ಮುಗಿದರೂ ಮುಗಿಯಬಹುದೆಂಬ ಸೂಚನೆಗಳು, ಬಿಳಿ ಬಿಳಿಯರ ಯುದ್ಧ ಮುಗಿದರೆ, ಇಡೀ ಯುದ್ಧವೇ ಮುಗಿದಂತೆ. ಏಕೆಂದರೆ ಬಿಳಿ ಬಿಳಿಯರೆಲ್ಲಾ ಒಟ್ಟಾಗಿ ಉಳಿದವರಮೇಲೆ ಬಿದ್ದರೆ, ಉಳಿದವರ ಗತಿ ಏನು ? ಅಂದಮೇಲೆ ವಿಶ್ವಶಾಂತಿಯು ಸದ್ಯದಲ್ಲೇ ಸನ್ನಿಹಿತ.

ಅಂದರೆ ಸಾಂಕ್ರಾಮಿಕ ಜಾಡ್ಯವೂ ಸನ್ನಿಹಿತ.

ರಾತ್ರಿ ಒಂಭತ್ತುಗಂಟೆ. ಪಕ್ಕದ ನೆರೆಯಾತ ಶಿವಯ್ಯನು, ಯಥಾ ಪ್ರಕಾರ, 'ಪೇಪರು ಬಂದಿದೆಯೋ' ಎಂದನ್ನುತ್ತಾ ಬಂದ. 'ಬಂದಿದೆಯಯ್ಯಾ' ಎಂದು ಹೇಳಿ ನಾನು ಯೋಚಿಸುತ್ತಿದ್ದುದನ್ನು ಹೇಳಿದೆ.

'ಅಂದರೆ ಇನ್ನೆರಡು ಮೂರು ತಿಂಗಳಲ್ಲಿ ಲೋಕದಲ್ಲೆಲ್ಲಾ ಇನ್ನೊಂದು ಸಾಂಕ್ರಾಮಿಕ ಜಾಡ್ಯ ಬರುತ್ತದೆ ಎನ್ನುತ್ತೀರಾ?'

'ಹೌದಯ್ಯಾ ಹಾಗೆ ಕಾಣಿಸುತ್ತದೆ, ಈ ಶಾಸ್ತ್ರಜ್ಞನ ಭವಿಷ್ಯ ಓದಿದರೆ'

'ಶಾಸ್ತ್ರಜ್ಞ ಸುಳ್ಳು ಹೇಳುತ್ತಾನೆಯೋ?'

'ಯಾಕೆ ಹೇಳುತ್ತಾನೆ? ಚರಿತ್ರೆಯ ಶೋಧನೆ ಮಾಡಿ, ಸಾಂಕ್ರಾಮಿಕದ ತಳಹದಿಯನ್ನು ವಿಚಾರಿಸಿಯೇ ಬರೆಯುತ್ತಾನೆ'

'ಅಂದಮೇಲೆ ನಮ್ಮ ದೇಶಕ್ಕೂ ಬಂತು'

'ಬರದೆ ಏನು, ನಮ್ಮ ದೇಶವೂ ಲೋಕದಲ್ಲಿಯೇ ಇದೆಯಲ್ಲ?'

"ಅಂದಮೇಲೆ ದೊಡ್ಡ ದೊಡ್ಡ ಘಟಗಳೂ ಬಿದ್ದುಹೋಗಬಹುದು"

'ಓಹೋ ಸಾಧ್ಯ.'

"ಚಿಕ್ಕ ಚಿಕ್ಕವರೆಲ್ಲಾ ಅವರ ಹಿಂದೆಯೇ ಚಲ್ಲಾಪಿಲ್ಲಿ"

'ಅನುಮಾನವೇನು?'

'ಸಿದ್ಧ ಕಟ್ಟಿಯ ಹೊಟ್ಟೆಗಿಲ್ಲದವರೂ ಹಿರಿಯಾಳುಗಳಾಗಿ ಹಣವಂತರಾಗ ಬಹುದು'

'ಖಂಡಿತ'

'ಅದರೆ ಇಷ್ಟರಲ್ಲೇ ಮಹಾಚುನಾವಣೆಗಳಾಗಬೇಕಲ್ಲಯ್ಯಾ—ಅಷ್ಟರಲ್ಲೇ ಈ ಸಾಂಕ್ರಾಮಿಕ ಬರುತ್ತದೆಯೋ?'

'ಹೌದಲ್ಲಯ್ಯಾ, ಅದು ಯೋಚಿಸಲೇ ಇಲ್ಲ—ಆದರೆ ಎರಡೂ ಒಟ್ಟಿಗೆ ಬರ ಲಾರದು. ಒಂದೊಂದಾಗಿ ಬರಬಹುದು - ಬರಬಹುದೇನು, ಬರಲೇಬೇಕು, ಎರಡರ ಪರಿಣಾಮವೂ ಒಂದೇಯಾದ್ದರಿಂದ, ಎರಡೂ ಒಟ್ಟಿಗೆ ಬಂದರೆ ಒಂದು ನಿರರ್ಥಕ. ಹಾಗಾಗುತ್ತದೆಯೋ?'

"ಇಲ್ಲ ಇಲ್ಲ,—ಆದರೂ ಮುಂದಾಗಬಹುದಾದುದನ್ನು ಯೋಚಿಸಿ ಇಂದೇ ಏಕೆ ವ್ಯಥೆಪಡುವುದು? ಪೇಪರ್ ಓದಿದ್ದರೆ ಕೊಡಿ. ನಾಳೆ ಕಳಿಸುತ್ತೇನೆ.

— ಶಿವಯ್ಯ.

ಏನು ಮಳೆ

ಭಾನುವಾರ ಸಾಯಂಕಾಲ ಊರ ಮೈದಾನದಲ್ಲಿ ರಾಜಕೀಯ ಸಭೆ ಸೇರ ಬೇಕಾಗಿತ್ತು. ಮರದ ಕೆಳಗಿನ ಬೆಂಚುಗಳಮೇಲೆ ಮುಖಂಡರೆಲ್ಲರೂ ಕುಳಿತು ಚರ್ಚಿಸುತ್ತಿದ್ದರು ಸಕಲ ಪಕ್ಷಗಳೂ ಅಂದು ಸಭೆ ಸೇರಿ ಏನಾದರೂ ಇತ್ಯರ್ಥ ಮಾಡಬೇಕೆಂದು ಹವಣಿಸುತ್ತಿದ್ದರು. ಇನ್ನೇನು ಕಾಲು ಗಂಟೆಯಲ್ಲಿ ಪ್ರಚಂಡ ಸಭೆ ಸೇರಬೇಕು, ಅಷ್ಟರಲ್ಲೇ ಭಾರೀ ಮಳೆ ಆರಂಭವಾಯಿತು. ಮುಖಂಡರೆಲ್ಲಾ ಮರದಕೆಳಗೇ ನಿಂತರು. ಬಂದವರೆಲ್ಲಾ ಬಂದದಾರಿ ಹಿಡಿದು ಓಡಿದರು.

ಊರಿನ ಪತ್ರಿಕಾ ಪ್ರತಿನಿಧಿಗಳೆಲ್ಲಾ, ಅಯ್ಯೋ! ಒಂದು ಹಾಳೆ ತುಂಬುತ್ತಿದ್ದೆವಲ್ಲಾ, ನಾಳೆಗೆ ಏನಪ್ಪಾಗತಿ! ಎಂದನ್ನುತ್ತಿದ್ದರು.

ಆದರೆ.........

ವಿಶ್ವಮಿತ್ರ ಹಾಡು ಪತ್ರಿಕೆಯ ಬಾತ್ಮೀದಾರರು ಮಳೆಗೆ ಹೆದರುವರೇ? ಎಂದಿಗೂ ಇಲ್ಲ. ಮರುದಿನ ಆ ಪತ್ರಿಕೆಯಲ್ಲಿ ಸರ್ವಪಕ್ಷ ಸಮ್ಮೇಳನದ ಸುದ್ದಿಯು ಬಂದೇ ಬಂತು, ಹಾಳೆತುಂಬ ಬಂತು.

ಸರ್ವಪಕ್ಷ ಸಮ್ಮೇಳನ, ಮಳೆಯಿಂದ ತೊಯ್ದುಹೋಯ್ತು. ಆದರೇನು, ವಿಶ್ರಮ ಜೀವಿಗಳ ಮುಖಂಡರು ಮರದಕೆಳಗೆ ಬೀಡಿ ಸೇದುತ್ತಾ ಹೀಗೆಂದರು. "ಇಂಥಾ ಭಾರಿ ಮಳೆ, ಇಂತಹ ಸಮ್ಮೇಳನವನ್ನು ನೆನೆಸಿದುದು, ಮೂವತ್ತು ವರ್ಷಗಳ ಹಿಂದೆ ಆಗ ನಾನು ಶಾಲೆಯಲ್ಲಿ ಓದುತ್ತಿದ್ದೆ. ಅಲ್ಲಿಯೂ ವಿಶ್ರಮ ಜೀವಿಗಳ ಪರವಾಗಿ ಆಹ್ವಾನಿಸಲ್ಪಟ್ಟಿದ್ದೆ. ಬಂತು, ಬಂತು, ಮಳೆ, ಈಗಿನಂತೆಯೇ ಆಗಲೂ. ಆದರೆ ಒಂದು ವ್ಯತ್ಯಾಸ. ಆಗ ಬಂದಮಳೆ ಬಿಟ್ಟು ಬಿಟ್ಟು ಬಂತು. ಆಟ ಆಡುವಹಾಗೆ ಬಂತು, ಇದೋ ಬಂದೆ, ಅದೋ ಹೋದೆ ಎನ್ನುತ್ತ ಬಂತು. ಈಗಾದರೆ ನೋಡಿ ಯುದ್ಧಕಾಲ. ಬಿಟ್ಟರೆ ಏನಾಗುತ್ತೋ ಎಂದು ಬರುತ್ತಿದೆ. ದೇಶಕ್ಕೆ ದೇಶವೇ ಆಕಾಶದ ಕಡೆಗೆ ಕಾರಣಾಂತರಗಳಿಂದ ನೋಡಿದರೂ, ಮೋಡಗಳು ಮಾತ್ರ ನಮ್ಮನ್ನೇ ನೋಡುತ್ತಾರೆಂದುಕೊಂಡು ಝುರ್ರೊ ಎಂದು ಹುಯ್ಯುತ್ತಿವೆ. ಈ ಕಾಲವೇ ಹೀಗೆ, ಆಟಪಾಟವೇ ಇಲ್ಲ ಪ್ರಕೃತಿಗೂ ಕೂಡ."

ಪೋಷಕ ಜೋದಕರ ಮಾಜಿ ಮುಖಂಡನಂದರು, "ಈಗಿನ ಮಳೆಗೂ, ಹತ್ತು ವರ್ಷಗಳ ಹಿಂದೆ ಬಿದ್ದ ಮಳೆಗೂ ಬಹಳ ವ್ಯತ್ಯಾಸವಿದೆ. ಅಗ್ಗ ಬಿದ್ದ ಮಳೆ ಒಂದು ರೀತಿಯಾಗಿ ಒಣಗಿದ ಮಳೆ. ಈಗ ತೊಯ್ದುಮಳೆಯೇ ಬೀಳುತ್ತಿದೆ. ಅಲ್ಲದೆ ಈಗಿನ ಮಳೆಯನೀರು, ನಾವು ಕುಡಿಯುವ ಕ್ಷೀರದಂತೆ ರುಚಿಯಿದೆ."

ಪ್ರಗತಿ ರಾಜಕೀಯ ಮುಖಂಡರಂದರು, “ ಇಂದು ಮಳೆ ಬರದೇ ಇದ್ದಿದ್ದರೆ, ಸಭೆಗೆ ಸಭೆಯೇ ನಮ್ಮ ಪರವಾಗಿ ಒಕ್ಕೊರಲಿನಿಂದ ಧ್ವನಿಗೈಯುತ್ತಿದ್ದಿತು. ಸರಿಯಾದ ಭಾಷಣವನ್ನು ತಯಾರಿಸಿದ್ದೆ. ರಾಜಕೀಯದಲ್ಲಿ ಹಳೇ ಸಂಪ್ರದಾಯಗಳಿಗೆ ಎಡೆಯೇ ಇಲ್ಲ. ಹೊಸ ಮಾರ್ಗ ತಯಾರಿಸಲೇ ಬೇಕು, ಯುವಕರ ನೆತ್ತರ ಸುರಿಸಲೇಬೇಕು, ಇಲ್ಲವಾದರೆ ನವಜೀವ ಬರುವುದಾದರೂ ಹೇಗೆ, ಈ ಹಾಳು ಮಳೆ ಬಂತು, ಎಲ್ಲವೂ ನೀರುಪಾಲಾಯಿತು. ಇಲ್ಲದೇ ಇದ್ದಿದ್ದರೆ, ಜರಿಪೇಟ ಹಾರಿಸಿ ಜಯಭೇರಿ ಹೊಡೆಸುತ್ತಿದ್ದೆ ”

ನವಯುಗ ಸ್ತ್ರೀಯರ ಮುಂದಾಳು ಹೇಳಿದಳು, “ ಇದು ನೋಡಿ, ದೇವರೇ ಕಣ್ಣೀರಿಡುತ್ತಿದ್ದಾನೆ. ಸರ್ವಪಕ್ಷ ಸಮ್ಮೇಳನದ ಅಧ್ಯಕ್ಷತೆಗೆ, ನಮ್ಮ ಪ್ರತಿನಿಧಿಯನ್ನು ನೀವು ಚುನಾಯಿಸಿದ್ದಿದ್ದರೆ, ಹೀಗೆ ಆಗುತ್ತಲೇ ಇರಲಿಲ್ಲ. ಹಾಗೆ ಮಾಡದೇ ಇದ್ದರಿಂದಲೇ ಹೀಗಾಯ್ತು. ಇನ್ನುಮೇಲಾದರೂ ನಿಮಗೆ ಬುದ್ಧಿ ಬರಲಿ, ನಾವಿಲ್ಲದೇ ಇದ್ದರೆ, ನಿಮಗೆ ರಾಜಕೀಯವೇಕೆ, ಸ್ವತಂತ್ರವೇಕೆ, ಸಾಮರ್ಥ್ಯವೇಕೆ, ವಿವಿಧಪಕ್ಷಗಳಾದರೂ ಏಕೆ ? ಹಾಗಿರುವಲ್ಲಿ ನಮ್ಮನ್ನೇ ಹಿಂದುಗೂಡಿಸಿದರೆ, ಯಾವ ದೇವರು ಸುಮ್ಮನಿದ್ದಾನು ? ” ಎಂದು,

ವಿಧವಿಧವಾಗಿ ಸಂಭಾಷಣೆಗಳು ಮಳೆಯಲ್ಲೇ ನಡೆಯಿತು. ಒಬ್ಬನೇ ಸಂತೋಷದಿಂದ ನಗುತ್ತಿದ್ದನು. ಅಂದಿನ ಸಭೆಗೆ ಮುಂಗಡ ಹಣ ಪಡೆದು ಹೂವಿನ ಹಾರಗಳನ್ನು ಸರಬರಾಯಿ ಮಾಡಿದ್ದ ಹೂವಾಡಿಗ.

ಇದು ಕೇಳಿದ್ದರೇನು ?

ಒಂದು ಬೆಕ್ಕು, ಕೊಬ್ಬರಿ ತಿಂದುಬಿಟ್ಟು, ಇಲಿ ಬಿಲದ ಹತ್ತಿರ ಹಸಿಹಸಿ ಉಸಿರುಬಿಡುತ್ತಾ ಕುಳಿತುಕೊಂಡಿತಂತೆ.

\+ \+ \+

ಈಗೀಗ ಬರುವ ಬೈಸಿಕಲ್ಲುಗಳಿಗೂ ಜೀವ ಇದೆಯಂತೆ. ಬುದ್ಧಿ ಬಂದಿದೆಯಂತೆ—ಮೊನ್ನೆ ಕಾಲೇಜಿಗೆ ಬೈಸಿಕಲ್ಲೊಂದೇ ಬಂದು ಗೋಡೆಯ ಪಕ್ಕದಲ್ಲಿ ನಿಂತಾಗ ಹತ್ತಿರಿದ್ದವನು ಅಂದನಂತೆ—‘ ರಾಮುವಿಗೆ ಏನಾಗಿದೆಯೋ ಕಾಣೆ — ಅವನ ಬೈಸಿಕಲ್ಲು ಒಂಟಿಯಾಗಿ ಬಂದಿದೆ ’’

\+ \+ \+

ಪೆಪ್ಪರ್‌ಮೆಂಟ್

ಅಂಗಡಿ ತುಂಬಾ ಬಣ್ಣಬಣ್ಣದ ರೂಪುರೂಪಿನ ಪೆಪ್ಪರ್‌ಮೆಂಟುಗಳು ಅಂದ ಚಂದದ ಗಾಜಿನ ಶೀಶೆಗಳಲ್ಲಿ ತುಂಬಿದ್ದುವು. ಅವುಗಳ ಹಿಂದಿನಿಂದ ಬೆಳಕು ಬರುತ್ತಿದ್ದು, ಈ ಶೀಶೆಗಳಿಗೆ ಒಂದು ತೆರನಾದ ಕಳೆಕೊಟ್ಟಿತ್ತು. ಇದನ್ನು ನೋಡುತ್ತಲೂ ಯಾಕೋ ಬಾಯೂರಿತು. ಇರಲಿ ಎರಡಾಣೆ ಕೊಟ್ಟು ಒಂದಿಷ್ಟು ಪೆಪ್ಪರ್‌ಮೆಂಟ್ ಕೊಂಡುಕೊಂಡು ಹೋಗೋಣ. ಮಿಕ್ಕಿದ್ದು—ಮಿಕ್ಕರೆ-ಮಕ್ಕಳಿಗೆ ಎಂದುಕೊಂಡು, ಅಂಗಡಿಗೆ ಹೋಗಿ ವ್ಯಾಪಾರಮಾಡಿ ಒಂದು ಪೊಟ್ಟಣ ಹೊರಕ್ಕೆ ತೆಗೆದುಕೊಂಡು ಬಂದೆ. ಒಂದನ್ನು ಬಾಯಲ್ಲಿ ಹಾಕಿಕೊಂಡು ಚಪ್ಪರಿಸುತ್ತಾ ಹೊರಟೆ,

"ರೀ! ರಿ! ಸಾರ್, ಇಲ್ಲಿ ಬನ್ರೀ!"

ಇದು ಯಾರು? ನನ್ನನ್ನೇ ಕರೆಯೋದು! ಅಯ್ಯೋ ದೇವರೆ, ಈ ಪೆಪ್ಪರ್‌ಮೆಂಟಿಗೂ ಪಾಲುದಾರ ಒಬ್ಬ ಬಂದನಲ್ಲಪ್ಪ. ಮಕ್ಕಳ ಬಾಯಿಗೆ ಮಣ್ಣು ಹಾಕುವವನು ಎಂದುಕೊಂಡು ಹಿಂತಿರುಗಿದೆ.

ಅಲ್ಲೊಬ್ಬ ಮನುಷ್ಯ. ಹಳದಿ ರುಮಾಲು ಸುತ್ತಿದ್ದಾನೆ. ಮಾರ್ವಾಡಿ ಜುಬ್ಬ ಹಾಕಿದ್ದಾನೆ. ಗಿರಕಿ ಚಡಾವು, ಕೈಲಿ ಒಂದು ಪೊಟ್ಟಣ. ನನ್ನ ಕಡೆಗೇ ಬರುತ್ತಿದ್ದ—ತನ್ನ ಸೈಕಲ್ಲು ನೂಕಿಕೊಂಡು.

'ಏನಯ್ಯ ಬೇಕು. ಏಕೆ ಕೂಗಿದೆ?' ಎಂದೆ.

ಅಷ್ಟು ಹೊತ್ತಿಗೆ ಪೊಟ್ಟಣದಲ್ಲಿದ್ದದ್ದು ಕಂಡಿತು "ಪೆಪ್ಪರಮೆಂಟು"

ತಕ್ಷಣ ಹೊಳೆಯಿತು. 'ವಿಷದ ಪೆಪ್ಪರ್‌ಮೆಂಟು. ನೆಟ್ಟದೃಷ್ಟಿಯು ಇವನೇ ಇರಬೇಕು ಅರಿಯದ ಹುಡುಗರಿಗೆ ವಿಷದ ಪೆಪ್ಪರಮೆಂಟು ಹಂಚುವ ಹತ್ಯಾಕಾರಿ. ಏನಾದರೂ ಮಾಡಿ ಇವನನ್ನು ಹಿಡಿದುಕೊಡಲೇಬೇಕು ಪೋಲೀಸಿನವರಿಗೆ' ಎಂದು ತಕ್ಷಣ ಮನಸ್ಸುಮಾಡಿದೆ. ಷರ್ಲಾಕ್ ಹೋಮ್ಸ್, ಎಡ್ಗರ್ ವಾಲೇಸ್, ಇವರನ್ನೆಲ್ಲಾ ಲೀಲಾಜಾಲವಾಗಿ ಓದಿ ಮುಗಿಸಿದ್ದ ನನಗೆ ಇವನನ್ನು ಹಿಡಿದುಹಾಕುವುದಕ್ಕೆ ಉಪಾಯ ತೋಚದೆ? ತಕ್ಷಣ ಒಂದು ಉಪಾಯ ಹುಡುಕಿದೆ— ಅಷ್ಟು ಹೊತ್ತಿಗೆ,

'ಗಂಟೆ ಎಷ್ಟು ಸಾರ್?' ಎಂದು ಅವನೇ ಕೇಳಿದ.

'ಹತ್ತುಗಂಟೆ ಕಣಯ್ಯಾ,' ಎಂದೆ.

'ಎತ್ತಲಾಗೋ ಮನೇಕಡೇನೆ?' ಎಂದ.

'ಹೂ ಕಣಯ್ಯಾ, ಬೇಗ ಮನೆಗೆ ಹೋಗಿ ಊಟಮಾಡಿ ಕಛೇರಿಗೆ ಹೋಗಬೇಕು' ಎಂದೆ.

‘ ಒಳ್ಳೇದೇ ಆಯ್ತು. ನಾನೂ ಆಕಡೇನೆ ಹೋಗುತ್ತಿದ್ದೆ. ಜತೇಲೆ ಹೋಗೋಣ ’ ಎಂದ.

ರೋಗಿ ಬಯಸಿದ್ದೂ............ ಅಂತ ನಾನು ಒಪ್ಪಿದೆ. ಹೋಗುತ್ತಾ, ಹೋಗುತ್ತಾ, ‘ ತಗೊಳ್ಳಿ ಸಾಮಿ. ಪೆಪ್ಪರಮೆಂಟು. ಮನೇಲೆ ಮಾಡಿದ್ದು ’ ಎಂದ.

ಅವನ ರೋಪು ನೋಡಿದಿರಾ ! ಹುಡುಗರಿಗೆ, ತಿಳಿಯದ ಬಾಲಕರಿಗೆ ವಿಷ ಹಾಕುವುದು ಇರಲಿ, ಮಕ್ಕಳತಂದೆ ನನಗೆ ವಿಷ ಉಣ್ಣಿಸುವುದಕ್ಕೆ ಬಂದನಲ್ಲಾ. ಜತೆಗೆ ಮನೇಲಿಮಾಡಿದ್ದು ಎಂದು ಬೇರೆ ಹೇಳುತ್ತಾನೆ. ಇದೇನು ಬಿಸ್ಕತ್ತೇ ಮನೇಲಿಮಾಡುವುದಕ್ಕೆ ! ಇಂತಹ ಧೈರ್ಯದವನಿಗೆ ಬುದ್ಧಿ ಸ್ವಲ್ಪ ವಿಕಲ್ಪವೇ ಆಗಿರಬೇಕು. ಇವನ ಹತ್ತಿರ ಹುಷಾರಾಗಿರಬೇಕು ಎಂದೆಂದುಕೊಂಡು ಅವನು ಕೊಟ್ಟ ಪೆಪ್ಪರ್‌ಮೆಂಟನ್ನು ಅವನಿಗೆ ಕಾಣದಹಾಗೆ ಜೇಬಿಗೆ ಹಾಕಿಕೊಂಡು ನನ್ನ ಜೇಬಿನಲ್ಲಿದ್ದ ಪೊಟ್ಟಣದಿಂದ ಒಂದನ್ನು ತೆಗೆದು ಬಾಯಿಗೆ ಹಾಕಿಕೊಂಡೆ.

ಅದೂ ಇದೂ ಮಾತನಾಡಿಕೊಂಡು ಮೆಲ್ಲಗೆ ನಮ್ಮನೆಯ ಹತ್ತಿರ ಕರೆದುಕೊಂಡು ಬಂದೆ. ‘ ಬನ್ರೀ ಒಂದು ಬಟ್ಟಲು ಕಾಫಿ ಕುಡಿದುಕೊಂಡು ಹೋಗುವಿರಂತೆ ’, ಎಂದೆ. ಆವೇಳೆಗೆ ಅವನ ಬೈಸಿಕಲ್ ಭದ್ರವಾಗಿ ಹಿಡಿದುಕೊಂಡಿದ್ದೆ. ಏನಾದರೂ ಜೋರುಮಾಡಿದರೆ ಗಟ್ಟಿಯಾಗಿ ಕೂಗಿ, ನೆರೆಯವರ ಸಹಾಯದಿಂದ ಇವನನ್ನು ಹಿಡಿಯೋಣ ಎಂದು ಮನಸ್ಸುಮಾಡಿದೆ.

ಅವನೂ ಜೋರಿನ ಧೈರ್ಯಶಾಲಿ. ‘ಹೂ’ ಎಂದು ಬೈಸಿಕಲ್ಲನ್ನು ಗೋಡೆಗೆ ಒರಗಿಸಿ ಒಳಕ್ಕೆ ಬಂದ. ನನ್ನ ಕೊಠಡಿಯಲ್ಲಿ ಕೂರಿಸಿ ‘ ಒಂದು ನಿಮಿಷ ಕಾಫಿ ತರ್ತೀನಿ ’ ಎಂದು ಹೇಳಿ ಹೊರಕ್ಕೆ ಬಂದು ಬೈಸಿಕಲ್ ಹತ್ತಿಕೊಂಡು ನೇರನೆ ಪೋಲೀಸ್ ಠಾಣೆಗೆ ಹೋದೆ. ಅಲ್ಲಿದ್ದ ಪೋಲೀಸಿನವನಿಗೆ ಎಲ್ಲಾ ಸಮಾಚಾರ ಹೇಳಿ, ಪೆಪ್ಪರಮೆಂಟ್ ವಿಷಕಾರಕನು ಈಗ ನನ್ನ ಕೊಠಡಿಯಲ್ಲಿದ್ದಾನೆಂದು ಹೇಳಿ, ಅವನನ್ನು ಕರೆದುಕೊಂಡು ಮನೆಗೆ ಬಂದೆ.

ಪೋಲೀಸಿನವನು ನನ್ನೊಡನೆ ಕೊಠಡಿಗೆ ಬಂದ. ಬಂದವನೇ ಪೆಪ್ಪರ್ ಮೆಂಟಿನವನನ್ನು ನೋಡಿ,

“ ನೀನೇ ಏನೋ—ಮುನ್ಸಾಮಿ ” ಎಂದ.

‘ ಹೌದೋ, ನಾನೇ ಕಂಡುಹಿಡಿದಿದ್ದು. ಈ ಮನೆಯವನೇ ಪೆಪ್ಪರ್ ಮೆಂಟಿನ ಹತ್ಯಾಕಾರಿ ಕಣೋ ನಾನೇ ನೋಡಿದೆ. ಒಂದಿಷ್ಟು ಒಳ್ಳೇ ಪೆಪ್ಪರ್ ಮೆಂಟು ಕೊಂಡು ಜೇಬಿಗೆ ಹಾಕಿ, ವಿಷದ ಪೆಪ್ಪರ್‌ಮೆಂಟಿನ ಜತೆಗೆ ಬೆರಸಿ ಹೋಗುತ್ತಿದ್ದ. ಇವನನ್ನು ಗುರ್ತಿಸಿ, ಹುಡುಗರಿಗೆ ಹಂಚುವಾಗಲೇ ಹಿಡಿಯೋಣ ಎಂದು ಮಾಡಿದ್ದೆ ’ ಎಂದ.

ಇಬ್ಬರೂ ನನ್ನನ್ನೇ ನೋಡಲಾರಂಭಿಸಿದರು.

“ ನನ್ನನ್ನ !”

— ಎ. ಸ್ವಾಂ.

ಅಪಶಕುನವನ್ನು ಬಳಸಿ ಬಂದ ಶೂರ



ಕುಯ್ಯೋ ಮರ್ರೋ!

(ಪ್ರ[illegible]ಕವನ)

ಅಯ್ಯೊ! ಅಯ್ಯೊ! ಅಯ್ಯೊ! ಅಯ್ಯೊ!
ಕುಯ್ಯೊ! ಮರ್ರೊ! ಕೂಗಿರಿ ಬೇಗ!
ಬಾವಿಗೆ ಬಿದ್ದನು ಬಡ ಜೋರಣ್ಣ!

\+ \+ \+

ಬಾವಿಯಸುತ್ತಲುವೇದಿಕೆ ಕಟ್ಟಿ
ಬಾವುಟ ಹಾರಿಸಿ ಚಪ್ಪರವೆತ್ತಿ—
ಕಾವಿಯ ಬಟ್ಟೆ ಕರಿ ನಿಲುವಂಗಿ
ತಾವೇ ಮಾಡಿದ ಖದ್ದರು ಬಟ್ಟೆ—
ಚಿಕ್ಕರು ಹೊಡೆಯಿರಿ ಹಗಲೂ ಇರುಳೂ,
ಪಿಕ್ಚರು ತೆಗೆಯಿರಿ ಒಳಗಿನ ಪ್ರಾಣಿಯ!

ಅಯ್ಯೋ! ಪಾಪ[illegible]ತ್ತನೆ ನೀರಲಿ?
ಅಯ್ಯೋ! ಪಾಪ[illegible]ತ್ತರೆ ಒಳ್ಳಿತು!
ಅಯ್ಯೋ! ನೀರೊ[illegible]ಗುಸಿರೆಯೊ ಏನೊ?
ಅಯ್ಯೋ! ದೀಕ್ಷಾ[illegible]ಲಿತಾ! ಬಡವಾ!

\+ \+

ಗವಿಯ್ಯೂ ಕೇಳಿಯ[illegible]ರೆ ಇವನನು?
ಸವಿಯೂ ಕಹಿಯ[illegible]ವೆ ಇವನಲು?
ಕಮಲವೆ ಅಲ್ಲವೆ [illegible]ಮುಸುಡಿ?
ಕೋಗಿಲೆಗಿಂತಲು [illegible] ಇವನು?

ಸಾಲದ ಕಾಟದಿ, ಹಸಿವಿನ ಹೊಡೆತದಿ
ಹೆಂಡದ ಅಮಲಲಿ, ಭಂಡರ ಕಾಟದಿ
ಬಾಳನು ಜರಿಯುತ, ಗೋಳನು ಕರೆಯುತ
ಆಳದ ಬಾವಿಯ ಹುಡುಕಿದನೇನೋ?

\+ \+ \+

ಸಾಲವ, ಸೋಲವ, ಭಂಡರ, ಹೆಂಡವ,
ಬಾವಿಗಳೆಲ್ಲವ—ಮುಚ್ಚಲೆ ಬೇಕು
"ಕುಯ್ಯೋ ಮರ್ರೊ ಕಾನ್ಫರೆನ್ಸೊಂದನು"
ಅಯ್ಯೋ! ಬೇಗನೆ ಕೂಡಿಸಬೇಕು!

ರೈಲಿನ ಲಾವಣಿ

ವಸುಧಾವಲಯದೊಳೆಸೆಯುವ ಮೈಸೂರ್—
ರೈಲು ಪ್ರಯಾಣದ ವಿಷಯವನು ।
ಗತಿ । ತಾಳಗಳೊಂದಿಗೆ ರಚಿಸಿದೆನು ।
ಯತಿ । ಪ್ರಾಸಗಳೊಂದಿಗೆ ಬರೆದಿದನು
ಬಲು । ತ್ರಾಸದಿ ಬಳಲುತ ಲೊದರುವೆನು ।
ಭೂಜನಕೋಟಿಪ್ರ - ಜಾವಳಿ ಕೇಳಲು
ಮೋಜಿನಿಂದ ನಾಂ ಪಾಡುವೆನು ॥ಪ॥

ಹೊಸ ಹೊಸ ಜಾಗಕೆ ಚಾಕರಿದಾರರು
ಮನೆ ಮಠ ಸಹಿತವೆ ಸೇರಲಿಕೆ ।
ತಂ । ಸೊಸೆಯರ ತವರಿಗೆ ರವಾನಿಸಿ
ನೋಣ್ । ಹಸೆಯಲಿ ಅಳಿಯನ ಜಮಾಯಿಸಿ
ಆ । ಮದುವೆ ಮುಂಜಿಗಳ ನೋಡಲಿಕೆ
ಬಾಂ । ಧವರಲಿ ವರನನು ಬೇಡಲಿಕೆ
ವರ್ತಕವೃಂದವು - ಸುತ್ತಲು ತಿರುಗುತ
ತೆತ್ತ ಸಾಲಗಳ ವಸೂಲಿಗೆ ॥೧॥

ರೈಲೇ ಗತಿ ನಮಗೀಗಿನ ಕಾಲದಿ
ರೈಲೇ ಸರಿಯದು ಬಸ್‌ಗಳಿಗೆ ।
ಅವು । ರಿಕಾಣಿ ಬಿಡುವುವು ನಡುಮಧ್ಯೆ ।
ನಾವ್ । ರೀಕು ತೋರಿದರೆ ನಡಿಯುತ್ತೈ ।
ಕೊಟ್ಟ್ಯ ತೋಳುಗಳ - ಒಟ್ಟಿಗೆಲ್ಲರೂ
ಛಟ್ಟನೆ ಇಳಿಯುತ ತಳ್ಳಬೇಕು ॥೨॥

ರೈಲಿಗೆ ಹೊರಡಲು - ಗಂಟುಮೂಟೆಗಳ
ಟೈಮಿಗೆದ್ದು ಬಿಗಿದಣಿ ಮಾಡು ।
ಮನೆ । ಹೆಂಗಸರಿದ್ದರೆ ಬಲುಗೋಳು ।
ಹಸು । ಕೂಸುಗಳಿದ್ದರೆ ಬಲುವರ್ಸು ।

ಚಾರುತರ ಶೃಂ - ಗಾರದಲವರುಗ
ಳಾರು ಹೊರಡರು - ಬಹುಸೂನಾಗಿ || ೩ ||

ಬೆಳಗಿನ ಜಾವದಿ - ಜಟಕ ಸಾರಥಿಗ
ಳೇಳುವ ಮುನ್ನವೆ ಕಾದಿದ್ದು
ವರ | ವಿನಯದಿಂದಲೆ ಕೈ ಮುಗಿದು
ಅವ | ನಿಂದ್ರ ಚಂದ್ರನೇ ಎಂದೆಂದು
ಹೇಳಿದ ಬಾಡಿಗೆ - ತೆತ್ತರು ಮತ್ತೆ
ಕೇಳಿದಿನಾಮನು ಕೊಡಬೇಕು || ೪ ||

ಕುಸ್ತಿಯನಾಡುವ - ರುಸ್ತುಮವೀರರು
ಉಸ್ತಾದಿ ಹೀರೋ ಒಳನುಗ್ಗಿ
ಜನ | ಒಟ್ಟಾಗಿ ಕೈ ಕೈ ತುರುಕುವರು
ತುಸು | ಪೆಚ್ಚಾಗಿ ಚೇಂಜನು ತೊರೆಯುವರು
ಟಿಕೀಟು ಚೂರನು - ಮೇಲೆತ್ತಿ ಹಿಡಿಯುತ
ಪಾಕೀಟ ಕಳಕೊಂಡು ಮರುಳುವರು || ೫ ||

ಗಾಡಿಯ ಸಾಲನು - ಪರಿಕಿಸಿ ಸುಲಭದಿ
ಕೊಡಲು ಜಾಗವ ಹುಡುಕುತಿರೆ
ಬಲ್ | ಬೈಗಳ ಮಳೆಯನು ಕರೆಯುವರು
ವರ | ಕೈಗಳ ಕಳಚುತ ದಬ್ಬುವರು
ನಂ | ಟ್ರಂಕು ಹಾಸಿಗೆಯ ನೆಸೆಯುವರು
ನೀ ಮುಂದಿನಗಾಡಿಗೆ ತೊಲಗೆಂಬರು
ನಾ | ವಿಲ್ಲೀ ಸಾಯುವೆವೆಂತೆಂಬರು
ಶತ್ರು ದುರ್ಗದಾ - ಲಗ್ಗೆಯತೆರದಲಿ
ಸತ್ರೂ ಬಿಡೇವೆಂದು ನುಗ್ಗಬೇಕು || ೬ ||

ಮೂಡಿದ ಜಗಳದಿ - ಬೀಡಿಯ ಹೊಗೆಯಲಿ
ಬ್ಲೀಡಿಪ ತಗಣೆಯ ತಿನಿಸಿನಲಿ |
ಆ | ಗಪ್ಪು ವಾಸನೆ ಬಡಿತದಲಿ
ಬಹು | ಬೆಗ್ಗರ ದುರ್ಗೀತ ಗರಗಸದಿ
ತೂ | ಕಡಿಸುವ ತಲೆಗಳ ನೃತ್ಯದಲಿ
ಆ | ಕಳಿಸುವ ಬಾಯ್ಗಳ ನಾತದಲಿ
ಪಿಂತೆ ಗೈದಘನ — ವಾಂತ ಪಾಪಕಾ
ವಿಂತು ಕಾಡುತಿದೆ ಎನ್ನುತಲಿ || ೭ ||

ಸೀತುವೆ ಕುಸಿದಿದೆ - ಕೈಮರ ಚಿಗುರಿದೆ
ಏತಕೊ ಗಾರ್ಡರು ಬರಲಿಲ್ಲ ।
ಅತಿ । ನಿಧಾನವಾಯಿತು ಮೇಲ್ ಬರಲು
ಸಾವಧಾನವಾಯಿತು ಕೋಲ್ ತರಲು
ಮುನ್ನೆ ಸಗಿದ ಮಿಗಿ - ಲೆನ್ನುವ ಟೈಂ ಟೇ
ಬಲ್ಲೀ ಚೂರ್ಚೂರಾಗುತಿದೆ ॥ ೮ ॥

ಬೇಡವೆಂದರೂ - ಬಂದೆವಲ್ಲಾ ಎಂದು
ಬಡಿಯುತ ಹಣೆಯನು ಶಪಿಸುತಿರೆ ।
ಜಗ । ದಂಚಿಯ ಕರುಣಾದಿ ಊರು ಬರೆ
ಸಲೆ । ದೊಂಬಿಯು ಭೇದಿಸಿ ಕೆಳಗಿಳಿಯೆ
ಜಟಕದ ಗಡಿಬಿಡಿ - ಪೋರ್ಟರ ಹಾವಳಿ
ತಪ್ಪಾಯ್ಸಿ ಎಲ್ಲವ ಮನೆಸೇರೆ ॥ ೯ ॥

ಬಿಜಯುಗೈದಮಹ - ನಂಟರಿಷ್ಟರಿಗೆ
ಗಜೇಂದ್ರ ಭೋಗದ ಸಾರನ್ನ ।
ಅದ । ಪೇಯಿಸೆ ಹಾರ್ತಲಿ ಉರಿ ಇಲ್ಲ
ಜನ । ಸೇರಿಸಿ ಕೂಪನ್ ತರಲಿಲ್ಲ
ಮನ । ನೋಯಿಸಿ ತಿನ್ನಲು ಸುಖವಿಲ್ಲ
ಕಾಟಾಚಾರದ - ಊಟೋಪಚಾರವು
ಪಾಟಾಳಿನಾಥನಿಗೆ - ಸರಿಇಲ್ಲ ॥ ೧೦ ॥

— ಶಾಂತಪ್ರಿಯ

ಇದು ಕೇಳಿದ್ದರೇನು ?

ಮಲೆನಾಡಿನಲ್ಲಿ ಒಬ್ಬ ಬೈಸಿಕಲ್ಲಿನಮೇಲೆ ಹೋಗುವಾಗ, ಮುಂದಿನ ಚಕ್ರವು ದೊಡ್ಡ ಹಾವೊಂದರಮೇಲೆ ಹೋಯಿತಂತೆ. ಚಕ್ರದ ಉಸಿರು ಇಂಗಿಹೋಯ್ತಂತೆ. ಹಾವು ದೊಡ್ಡದಾಗಿ ಬಾಯಿತೆರೆದು ಅವನನ್ನು ಕಚ್ಚಲು ಬರಲು, ಅವನು ಧೈರ್ಯವಾಗಿ ಅದರ ಬಾಲವನ್ನೇ ಹಿಡಿದು ಆ ಬಾಯಿಗೆ ತುರುಕಿದನಂತೆ. ಕೋಪದಿಂದಿದ್ದ ಆ ಹಾವು ಅರಿಯದೆ ಆ ಬಾಲವನ್ನೇ ನುಂಗಲಾರಂಭಿಸಿತಂತೆ. ಮುಂದಿನ ಚಕ್ರಕ್ಕೆ ಅದನ್ನೇ ಪೋಣಿಸಿಕೊಂಡು ಸವಾರನು ಹೊರಟನಂತೆ.

ನಾನೊಬ್ಬ ಸಾಹಿತಿ

' ಯಾರದು ? ಇರಹೇಳು. ' ಈಗಲೇ ಬರ್ತ್ತಾರೆ, ಊಟಮಾಡ್ತಾ ಇದ್ದಾರೆ, ಕೂತುಕೋಬೇಕಂತೆ ' ಅಂತ ಹೇಳಿ ಚಾಪೆಹಾಸು, ಮಗು— ಹಾಸಿದೆಯಾ— ಕೂತುಕೊಂಡರೆ ?— ಯಾರಂತೆ ?—ಓಹೋ— — ಊರಿನ ಕರ್ನಾಟಕ ಸಂಘದವರೇ ?— ಇರಲಿ ಈಗಲೇ ಬಂದುಬಿಟ್ಟೆ. ''

" ನಮಸ್ಕಾರ, ನಮಸ್ಕಾರ,— ಪರವಾಗಿಲ್ಲ ಕೂತ್ಕೊಳ್ಳಿ — ಏನು ಎಲ್ಲ ಹುಡುಗರು — ನೀವೆಲ್ಲ ಏನುಮಾಡುತ್ತಿದ್ದೀರಿ ?— ಓಹೋ ಎಲ್ಲಾ ಕಾಲೇಜಲ್ಲಿ ಓದುತ್ತಿದ್ದೀರೋ ?— — ಏನು ಇನ್ಯಾರೂ ಸಿಕ್ಕಲಿಲ್ಲವೆ ?— ನಾನೇ ಆರಂಭ ಭಾಷಣಮಾಡಬೇಕೆ ?—ಓ, ಜನವರಿ ೧೦ನೇ ತಾರೀಖು ಸಾಯಂಕಾಲವೋ ?— ಆಗಲಿ — ತುಂಬಾ ಸಂತೋಷ — ಏನು ? ನೀವೇ ಭಾಷಣದ ವಿಷಯಾನೂ ಹೇಳ್ತೀರಾ ?— ಮತ್ತೂ ಸಂತೋಷ — ಹುಂ, ಹುಂ, ಹುಂ, — ಹೋಗಿ ಬರ್ತೀರಾ ?— ನಮಸ್ಕಾರ. "

* * *

" ಜೀ, ಇವತ್ತು ಜನವರಿ ಒಂಬತ್ತೂ!— ಜ್ಞಾಪಕವಿದೆಯೇನೆ, ಆ ಹುಡುಗರು ಬಂದಿದ್ದು ?—ಹಾಳು ಹುಡುಗರು—ಹುಂ, ಏನೋ ಪಾಪ ಬಂದು ಕೇಳಿದರು ಒಪ್ಪಿಕೊಂಡಿದ್ದೇನೆ— ಇವತ್ತು ರೈಲಿಗೆ ಹೋಗ — ಏನು ಹುಡುಗರಪ್ಪ — ನನ್ನ ಸ್ನೇಹಿತರಿಗೆ ಕೂಡ ತಿಳಿಸಲಿಲ್ಲ — ಥೂ ಹುಡುಗಾಟ — ಹ್ಯಾಂಡ್‌ಬಿಲ್ಸ್ ಕೂಡ ಅಚ್ಚು ಹಾಕಿಸಿಲ್ಲ—ಯಾರಿಗಾದರೂ ತಿಳಿಯಪಡಿಸಿದಾರೋ ಇಲ್ಲವೊ—ಹೋಗ್ಕೊಳ್ಳಿ ಪೇಪರಿನವರಿಗಾದರೂ ತಿಳಿಸಿದಾರೋ ಇಲ್ಲವೋ — ಅದೆಲ್ಲಾ ಇರಲಿ — ಅಡಿಗೆ ಬೇಗ ಆಗಬೇಕು ಗೊತ್ತಾಯ್ತೇನೆ ? "

* * *

" ಲೋ, ಮಗು ಆ ಜಂಖಾನ ತೊಗೊಂಬಾ — ನಿಂದೇ ಇದೆಯಲ್ಲಾ, ಆ ಹಾಸಿಗೇನೆ ಚೆನ್ನಾಗಿದೆ ಹಾಕು — ಏನು, ಶಾಲೂನೇ ? — ಪಕ್ಕದಮನೆ ರಾಮರಾಯರಿಗೆ ನಾನು ಹೇಳಿದೇಂತ ಹೇಳಿ ಒಂದು ಶಾಲುವೆ ತೊಗೊಂಬಾ — ಓಡು ಮಗೂ — ಬೆಡ್‌ಷೀಟ್ ಏನೇ ಎಲ್ಲ ಕೊಳೆ ಆಗಿವೆಯಲ್ಲೇ, ಸುಟ್ಟರೂ ಸುಡೋದಿಲ್ವಲ್ಲೇ — ಹಿತ್ತಲಕಡೆ ಮನೆಯವರದು ಒಂದು ಬೆಡ್‌ಷೀಟ್ ಆದರೂ ಕ್ಲೀನ್ ಆಗಿದ್ದರೆ ತೊಗೊಂಬಾರೇ — ಉಶ್ಶಪ್ಪ — ಎಲ್ಲಾ ಆಯಿತು — ಹಾಳು ಒಂದು ಟವಲಿಲ್ಲ — ಮಗೂ — ಸುಶೀಲಾ, ನಿನ್ನ ಗಂಡಂದು ಒಂದು ಟವಲು ಕೊಡಮ್ಮಾ— ಅಬ್ಬಾ ಆಯಿತು— ಮುಗಿಯಿತೇನೋ — ಆಂ, ಏನು,—ಏನೋ

ಅದು ಗೋಣಿಗುಟ್ಟಿಸ್ತಿದ್ದೀಯೆ—ಹೆಗ್ಗಸಿಕ್ಕಲಿಲ್ಲವೆ ?— ಕೊಡಿ ಎರಡಾಣೆ —ಚಿಲ್ಲರೆ ಇಲ್ಲವೆ ?— ರೂಪಾಯೀ ಕೊಡು — ಏನು 'ಎಲ್ಲಿದೆ' ಅಂತೀಯಾ — ಸರಿ ಹೋಯಿತು — ಊಂ, ತಗೋ — — — ಹಾಸಿಗೆ ಕಟ್ಟಿದ್ದಾಯಿತು ತಾನೆ — ನಿನ್ನ ಸೈಕಲ್‌ಮೇಲೇನೆ ಇಟ್ಕೊ ಕಿಟ್ಟಿ— ಇನ್ನು ಜಟ್ಕಾಗೆ ನಾನೆಲ್ಲಿಂದ ತರಲಿ — — ಬರ್‍ತೀನಪ್ಪ ಶಾರಿ — ಲೇ, ಮಗು, ಮನೆ, ಹುಷಾರು—ನಾಳೆ ಬಂದ್ಬಿಡ್ತೀನಿ — ಮನೆಕಡೆ ಭದ್ರ, ಭದ್ರ."

✦ ✦ ✦

"ಏನು ರಂಗಣ್ಣ, ಹೊರಟ್ಬಿಟ್ರಿ — ಮನೆಗೆ ಹೊರಟಿರಾ — ಇಲ್ಲ, ಇಲ್ಲ, ಯಾವ ಊರಿಗೂ ಇಲ್ಲ — ಇಲ್ಲೆ,—ಊರಿನ ಕರ್ನಾಟಕ ಸಂಘವಂತೆ—ಆರಂಭ ಭಾಷಣಮಾಡೋಕೆ—ಅವರಿಗೆ ಯಾರೋ ಹೇಳ್ಬಿಟ್ಟಿದಾರೆ— ನಾನೂ ಸಾಹಿತಿ ಅಂತ —ಬರ್‍ತೀನಿ ಹೊತ್ತಾಯಿತು."

"ಏನು ಶಿವಪ್ಪ—ಆರೋಗ್ಯವೇ—ಇಲ್ಲೆ — — ಊರಿನ ಸಂಘದ ಆರಂಭ ಭಾಷಣಮಾಡೋಕೆ — ಅವರಿಗೆ ಯಾರೋ ಹೇಳ್ಬಿಟ್ಟಿದಾರೆ ನಾನೂ ಸಾಹಿತೀಂತ ಯಾರೋ ಹೇಳ್ಬಿಟ್ಟಿದ್ದಾರೆ —"

"ನಮಸ್ಕಾರ ಸಾರ್, ಏನೂ ಇಲ್ಲ — ಇಲ್ಲೇ — ನಾಳೆ ರಿಟರ್ನ್— — ಊರಿನ ಕರ್ನಾಟಕ ಸಂಘದ ಆರಂಭಭಾಷಣ — ಹಾಳಾದ್ದು ಅವರಿಗೆ ಹೇಗೋ ಗೊತ್ತಾಗಿದೆ — ನಾನೊಬ್ಬ ಸಾಹಿತಿ ಎಂದು — — —

✦ ✦ ✦

[ಸ್ಥಳ—ರೈಲ್ವೆ ನಿಲ್ದಾಣ]

ಕಿಟ್ಟು ಹುಷಾರು — ನೀನಿನ್ನು ಮನೆಗೆ ಹೋಗಪ್ಪ — ಇನ್ನೇನು ರೈಲು ಕದಲುತ್ತೆ — ಕೂಗ್ತಾ ಇದೆ ನೋಡು — ಗಂಟೆ ಬಾರಿಸಿತು — ಯಾರಾದ್ರೂ ಕೇಳಿದರೆ ಹೇಳು — ಹೀಗೆ — — ಊರಿನ ಸಂಘದ ಆರಂಭಭಾಷಣಕ್ಕೆ ಹೋಗಿದಾರೆ —— ಅಂತ —— ಹೋಗ್ತೀಯಾ—— ಹುಷಾರು, ಭದ್ರ.

✦ ✦ ✦

[............ಊರಿನಲ್ಲಿ]

ನಮಸ್ಕಾರ — ನಮಸ್ಕಾರ, — ಏನ್ರೀ ನೀವು ಒಂದು ಹ್ಯಾಂಡ್‌ಬಿಲ್ ಕಳಿಸೋಕೆ ಆಗಲಿಲ್ವೆ — ಆಗಲಿ — — ಅಂ, ಏನು ! — — ಮುಂದುವರಿಸಿದೀರಾ ! — ನನಗೆ ತಿಳಿಸಬೇಡ್ವೆ ನೀವು ? — — ಏನು ಅಂಥಾದ್ದು ಇವತ್ತು - - - - - ಏನು ? —ಕಂಪೆನಿ ನಾಟಕವೇ — ಸರೀಹೋಯ್ತು— ಉ - ಶ್ಯ - ಪ್ಪ —

—ಆಚಾರಿ.

——o——

ಎಲ್ಲಾ ಹೀಗೇನೇ

ಸೌದೆ ತರುಕ್ಕೇ ಅಂತ ಹೋಗಿ, ಬೈಸಿಕಲ್ಲಿಗೆ ಸೌದೇನ ಕಟ್ಟಿ ಮನೆಗೆ ತಂದಿಳಿ ಸೋವಾಗ ಆ ಹಾಳು ಸೌದೆ ಬೆರಳಮೇಲೆಬಿದ್ದು ಯಾತನೆಯೋ ಯಾತನೆ ಆಯಿತು. ನೋವು ತೆಗೆಸೋಣ ಎಂತ ಹಣ್ಣಂಗಡಿ ಸಾಬಣ್ಣನ ಹತ್ತಿರ ಹೋದರೆ, ಅಲ್ಲೇ ಇರಬೇಕೆ ನನ್ನ ಹಳೇ ಸ್ನೇಹಿತ ಶಂಕರು.

ಶಂಕರು ನಾನೂ ಕಾಲೇಜಿನಲ್ಲಿ ಒಟ್ಟಿಗೆ ಓದಿದವರು ನನ್ನ ಮದುವೇಲಿ ಅವನೇ ಗಿಳಿಯು, ಅಷ್ಟು, ಅನ್ಯೋನ್ಯ ನಮನಮಗೆ—ನನ್ನ ಮದುವೆ ನೋಡಿದ ಮೇಲೆ, 'ನಾನು ಖಾಡಿತ ಕಿವಿಗೆ ಕೋಡುಬಳೆ ಕಟ್ಟಿಕೊಂಡು ಮೆರವಣಿಗೆ ಹೋಗೋದೇ ಇಲ್ಲ' ಎಂದು ಶಪಥಮಾಡಿದ. ಒಂದೆರಡು ವರ್ಷ ಏನೇನೋ ಮಾಡಿದೆವು. ಅವನು ಮದುವೆಗೆ ಒಪ್ಪಲೇ ಇಲ್ಲ. 'ಹೋಗಲಿ ಬಿಡೋ, ಒಂದು ಶೂದ್ರ ಹುಡುಗೀನೋ, ಒಂದು ದಂಡಿನ ಹುಡುಗಿಯನ್ನೋ ಮಾಡಿಕೊಳ್ಳೊ, ಆವಾಗ್ಲೆ ಈ ಮೆರವಣಿಗೆ ತಪ್ಪುತ್ತೇನೋ' ಎಂದೆವು. ಜಗ್ಗಲಿಲ್ಲ ಆಸಾಮಿ. ಕಡೆಗೂ ಬಾಲಬ್ರಹ್ಮಚಾರಿಯಾಗಿಯೇ ಇದ್ದ—

'ನೀನು ಯಾಕೊ ಇಲ್ಲಿಗೆ ಬಂದೆ, ನಿನಗೇನೂ ತಾಪತ್ರಯ ಇಲ್ಲವಲ್ಲೊ!'

"ಸಂಸಾರ ಇಲ್ಲದಿದ್ದರೆ ತಾಪತ್ರಯ ಇಲ್ಲದೆ ಏನೋ, ಮೊನ್ನೆ ಹುಣ ಸೂರಿನಿಂದ ಬರುತ್ತಿದ್ದೆ. ರೈಲು ಕಿಟಕಿ ಜೋರಾಗಿ ಎತ್ತಿದೆ ಅಷ್ಟರಲ್ಲೇ ಗಾಡಿ ಕುಲುಕಿತು ಕಿಟಕಿ ಮೊಣಕೈಮೇಲೆ ಬಿತ್ತು. ಏನು ನೋವು ಅಂತೀ," ಎಂದು ಮೊಣಕೈ ಮಾಲೀಸ್‌ಮಾಡ ಹತ್ತಿದ.

ಅಷ್ಟುಹೊತ್ತಿಗೆ ಒಳಗಿನಿಂದ ಹಣ್ಣಂಗಡಿ ಸಾಬಣ್ಣ ಹೊರಕ್ಕೆ ಬಂದ. ನಾವಿಬ್ಬರೂ ಒಟ್ಟಿಗೆ ಎದ್ದೆವು. ನಾವಿಬ್ಬರೂ ಮಾತನಾಡುತ್ತಿದ್ದುದನ್ನು ನೋಡಿ ಇಬ್ಬರಿಗೂ ಒಟ್ಟಿಗೇ ಆಗಬಹುದೇ ಎಂದ. ಹೂ ಎಂದು ಇಬ್ಬರೂ ಒಳಕ್ಕೆ ಹೋದೆವು, ನನ್ನ ಬೆರಳಿಗೆ ಮಣ್ಣುಹಚ್ಚಿ 'ಹತ್ತು ನಿಮಿಷ ಆಗಲಿ ಆಮೇಲೆ ನೀವುತ್ತೇನೆ' ಎಂದ. ಶಂಕರು ಮೊಣಕೈಯನ್ನು ಹಿಡಿದು, ನೀವಲು ಶುರುಮಾಡಿದ.

ಸಾಬಣ್ಣ ನೀವುವುದೇ ಒಂದು ಸೋಜಿಗ ಅವನ ಕೈಗಳು ನೀವುತ್ತಿದ್ದರೂ ಬಾಯಿ ಬಡಬಡ ಎನ್ನುತ್ತಲೇ ಇರುತ್ತದೆ. ಆ ಮಾತು ಈ ಮಾತು ನಗನಗುತ ಆಡುತ್ತಲೇ ಇರುತ್ತಾನೆ. ಸಮಯ ನೋಡಿ ರೋಗಿ ಮನಸ್ಸು ಎಲ್ಲೋ ಇರುವಾಗ ಲಠಕ್ಕೆಂದು ನೆಟ್ಟಗೆ ತೆಗೆಯುತ್ತಾನೆ. 'ಅಯ್ಯೋ' ಎಂದು ರೋಗಿ ನೋಡುವ ವೇಳೆಗೆ ಮೂಳೆ ಸರಿಯಾಗಿ ಕೂತುಕೊಳ್ಳುತ್ತೆ ಎಂದು ಸಾಬಣ್ಣನ ಸಿದ್ಧಾಂತ.

ಸರಿ, ಶಂಕರು ಈ ನಿಯಮಕ್ಕೆ ಸಿಕ್ಕಿದ.

"ಏನುಕಾಲ ಸ್ವಾಮಿ, ಅಕ್ಕಿ ತರುವಹೊತ್ತಿಗೆ, ಸೌದೆ ಇಲ್ಲ, ಸೌದೆ ಬರುವಹೊತ್ತಿಗೆ ಹಾಲಿಲ್ಲ, ಹಾಲು ಬಂದರೆ, ಪಾತ್ರೆ ತೂತು, ಹೀಗಾಗಿ ಬದುಕು ಪೂರ್ತಿ ಕಷ್ಟ" ಎಂದ.

ಶಂಕರು ನಿರುತ್ತರ.

ಸಾಮಾಜಿಕ ಮಾತುಗಳು ಶಂಕರುವಿಗೆ ತಟ್ಟಲಿಲ್ಲವೇನೋ ಎಂದು ಸಾಬಣ್ಣ ತಿರುಗಿ ಶುರುಮಾಡಿದ.

"ನಿಮ್ಮ ಹುಡುಗ ಸ್ವಸ್ಥವಾಗಿದ್ದಾನಲ್ಲವೇ ?"

ಶಂಕರು ವಿವರ್ಣ. ಒಂದು ನಿಮಿಷ ಆದಮೇಲೆ,

"ಹೂ" ಎಂದ.

"ಯಾವ ಕ್ಲಾಸೋ ?"

"ಮಾಧ್ಯಮಿಕ ಮೂರು" ಎಂದ.

"ಅಂದರೆ ಸುಮಾರು ಹತ್ತು ಹನ್ನೊಂದಿರಬೇಕು. ಬಲು ಮುದ್ದಾದ ವಯಸ್ಸು ಸ್ವಾಮಿ"

"ಹೌದು ಹೌದು"

"ಹಿಂದಿ ಕಲಿಸಿದ್ದೀರೇನೊ ?"

"ಈಗತಾನೆ ಶುರುಮಾಡಿದ್ದಾನೆ"

"ಸಂಗೀತಾನೂ ಹೇಳಿಸಬೇಕು ಸ್ವಾಮಿ, ಹುಡುಗರಿಗೆ ಸಂಗೀತ ಬಹಳ ಪ್ರಯೋಜನ. ಕಾಲೇಜಿಗೆ ಹೋದಾಗ ಅದರಿಂದಲೇ ತುಂಬಾ ನಂಬರು ಬರೋದು"

"ಅದೂ ಶುರು ಮಾಡಿಸಿದ್ದೇನೆ"

ಮೋಣಕ್ಕೆ ಅಷ್ಟುಹೊತ್ತಿಗೆ ಲಿಫ್ ಎಂತು, ಶಂಕರು ಅಯ್ಯಯ್ಯಪ್ಪೊ, ಎಂದ 'ಇನ್ನೆರಡು ದಿನಗಳಲ್ಲಿ ನೋವು ಹೋಗುತ್ತೆ' ಎಂದ ಸಾಬಣ್ಣ.

ಆನೋಜಿ ನನ್ನ ಕಾಲ್ಬೆರಳಿಗೂ ಎರಡು ನಿಮಿಷ ಎಣ್ಣೆ ತೀಡಿದ.

ಇಬ್ಬರೂ ಹೊರಕ್ಕೆ ಬಂದೆವು. "ಏನು ಶಂಕರು" ಯಾರೋ ಅದು ನಿನ್ನ ಹುಡುಗ ? ಹೆಂಡತಿ ಇಲ್ಲದೆ ಹುಡುಗನನ್ನು ಸಂಪಾದಿಸಿದೆ ಏನೋ ? ನಿನ್ನ ಹುಡು

ಗನೂ ಕಮಲಪತ್ರದ ಮೇಲೆ ತೇಲಿ ಬಂದನೋ ಅಥವಾ ವರಾಂಡದಲ್ಲಿ ಬೆಳಗಿನ ಜಾವ ಅಳುತ್ತಾ ಬಿದ್ದಿದ್ದನೋ ಅಥವಾ ”........ಎಂದೆ.

“ಏನೋ ಮಾಡೋದು, ಅಷ್ಟು ಪ್ರೀತಿಯಾಗಿ ಅವನು ಕೇಳಿದರೆ ಇಲ್ಲ ಎಂದು ಹೇಗೋ ಹೇಳೋದು ?” ಎಂದ.

ಇದಾದ ಒಂದು ವರ್ಷದ ನಂತರ ಮಕ್ಕಳು ಮರಿಗಳನ್ನೆಲ್ಲಾ ಕಟ್ಟಿಕೊಂಡು, ನಾನು ಸರ್ಕಸೊಂದಕ್ಕೆ ಮಧ್ಯಾಹ್ನ ಮೂರು ಗಂಟೆಗೆ ಹೋಗಿದ್ದೆ. ಎದುರು ಬೆಂಚಿನಲ್ಲಿ ಯಾರು ಎಂತೀರಿ? ಶಂಕರು ಮತ್ತು ಹನ್ನೆರಡು ವರ್ಷದ ಹುಡುಗ ಒಬ್ಬ. ನಾನು ಖಂಡಿತ ಸರ್ಕಸನ್ನು ನೋಡಲೇ ಇಲ್ಲ. ಆ ಹುಡುಗನನ್ನೇ ನೋಡುತ್ತಿದ್ದೆ. ಹುಡುಗ ಶಂಕರು—ಶಂಕರು ಹುಡುಗ.

ವಿರಾಮಕಾಲ ಬಂತು. ಶಂಕರೂನ ಕೂಗಿ, “ಬಾ ಒಂದೆರಡು ನಿಮಿಷ ಹೊರಗೆ ಹೋಗೋಣ. ನಿನ್ನ ಹುಡುಗ ನನ್ನ ಹುಡುಗರ ಜತೆಯಲ್ಲಿ ಕುಳಿತಿರಲಿ” ಎಂದು ಹೇಳಿ ಹೊರಕ್ಕೆ ಕರೆದುಕೊಂಡು ಬಂದೆ,

ಹೊರಕ್ಕೆ ಬಂದ ಕೂಡಲೆ ಶಂಕರು ಹೇಳಿದ.

“ನಿನಗೆ ಅರ್ಥವಾಗುಲ್ಲ ಇದೆಲ್ಲಾ. ಅವತ್ತು ಜ್ಞಾಪಕ ಇದೆಯೇ ಹಣ್ಣಂಗಡಿ ಸಾಬಣ್ಣ ಹೇಳಿದ್ದು. ಅವತ್ತು ಮನೆಗೆ ಹೋದೆ. ನಿದ್ರೆ ಬರಲಿಲ್ಲ. ಇರೋನು ಒಬ್ಬ. ಮದುವೆ ವಯಸ್ಸು ಮೀರಿದೆ. ಆದಾಕ್ಷಣ ಒಂದು ಮಗು ಸಾಕುವುದು ಚೆನ್ನ ಎನಿಸಿತು. ಅದೂ ಹತ್ತುವರ್ಷದ ಮಗು ಆದರೆ, ಬ್ರಹ್ಮಚಾರಿಗೆ ಸುಲಭ ಎನ್ನಿಸಿತು—ಮರುದಿನವೇ ಅನಾಥಾಲಯಕ್ಕೆ ಹೋಗಿ ಈ ಹುಡುಗನನ್ನು ಕರೆತಂದೆ, ಅವನನ್ನು ಸಾಕುತ್ತಿದ್ದೇನೆ” ಎಂದ.

“ನನಗೇನೂ ಅನುಮಾನವಿಲ್ಲ. ನೀನು ಹೇಳಿದ್ದೆಲ್ಲಾ ನಂಬುತ್ತೇನೆ, ನಾನೂ ಕತೆಗಾರ” ಎಂದೆ

“ಅದರೂ ರಾತ್ರಿ ಚೆನ್ನಾಗಿ ನಿದ್ರೆ ಬರುಲ್ಲ ಎಂದ

“ಮಕ್ಕಳಿದ್ದರೆ ಹಾಗೆಯೇ” ಎಂದು ಹೇಳಿದೆ.

——0——

ಯುದ್ಧವನು ಮಾಳ್ಪಾಗ ಹಿಡಿದೆದ್ದ ಹುಲಿಯಂತೆ, ಗೆದ್ದು, ಜನ ಎದ್ದು ನಿಂತಾಗ—ಚರ್ಚಿಲ್ಲ ಬುದ್ಧಿ ಬಲುನೊದ್ದು. ಸರ್ವಜ್ಞ.

ಲಿಲ್ಲೂ

ಲೇ! ಲಿಲ್ಲೂ! ಏನ್ಮಾಡ್ತಾ ಇದೀಯಾ! ಸ್ವಲ್ಪ ಬಾ ಇಲ್ಲಿ. ಇವತ್ತು ರಜ ಕಣೆ. ಆಫೀಸಿಗೆ ಹೋಗಬೇಕಾಗಿಲ್ಲ. ಬಾ. ಬಹಳದಿನದಿಂದ್ಲೂ ನಿನಗೆ ಎರಡು ಮಾತು ಹೇಳಬೇಕೂಂತ, ಸ್ವಲ್ಪ ಸಾವಕಾಶವಾಗಿ ಸಾವಧಾನವಾಗಿ ಸಮಾಧಾನ ದಿಂದ ಕೇಳ್ತಿಯಾ ?—

ನೋಡು ಲಿಲ್ಲೂ, ರಾಮಾಯಣ ಮಹಾಭಾರತ ಮಗುಚಿಹಾಕಿರೋ ನಿಂಗೆ 'ಸತಿಗೆ ಪತಿಯೇ ಪರದೈವ' ಎಂಬೋದು ಮನದಟ್ಟಾಗಿರಬೇಕು ಅದಕ್ಕೇ ಅಲ್ವೇನೆ ಸೀತೆ ಕಾಡಿಗ್ಹೋದ್ದು, ದ್ರೌಪದಿ ಸೈರಂಧ್ರಿಯಾಗಿದ್ದು—ನಿನ್ನ ಗಂಡನ ಅಂತಸ್ತಿಗೆ ಸರಿಯಾಗಿ, ಅವನ ಅಧಿಕಾರಕ್ಕನುಕೂಲವಾಗಿ, ನೀನೂ ಮುಂದುವರಿಯಬೇಕು ಕಣೇ. ರ್ಯಾಂಕು ಬರೋದಕ್ಮುಂಚೆ ಇದ್ದ ಲಚ್ಚ—ಅಲ್ಲ ಕಣೇ—ಈಗ, ನಾನೀಗ ಲಕ್ಷ್ಮಣರಾಯ, ಈ ಮೂರು ತಾಲ್ಲೋಕಗಳಿಗೂ ನಾನೇ ಅಧಿಕಾರಿ ಕಣೆ. ನೀನೂ ನನ್ಮಟ್ಟಕ್ಕೆ ಏರಬೇಕು ಈಗ. ನೆರೆಯವರನ್ನು ನೋಡು.

ಅಡ್ವೊಕೇಟ್ ಅನಂದ್ರಾಯರ ಅರ್ಧಾಂಗಿ ಅಂಬುಜಮ್ಮ, ಅಂಜುಬುರುಕಿಯಾದರೂ, ಅಳುಕದೆ ಮುಂದೆ ಬಂದು, ಮಹಿಳಾಮಂಡಲಿ ಮೆಂಬರಾಗಿದ್ದಾಳೆ.

ಶೆಟ್ಟಿ ಶಂಕರಪ್ಪನ ಸಂಸಾರ ಸಾವಿತ್ರಮ್ಮನೂ ಕೂಡ ಸಮಾಜಸೇವೆಗೆಂದು ಸೊಂಟಕಟ್ಟಿದ್ದಾಳೆ.

ಹೀಗೇ ನೋಡು, ಜಡ್ಜಿ ಜಗಪತಿರಾಯ್ನ ಜಾನಕಿ, ಮಾಮಲೆದಾರ ಮೂರ್ತಿರಾಯನ ಮಡದಿ ಮಾಲತಿ, ಎಲ್ಲರೂ ಮುಂದೆ ಬಂದಿದ್ದಾರೆ.

ನೋಡು ನೀನೂ ಇವರುಗಳ ಹಾಗೇ ಇರಬೇಕು - ಎರಡಕ್ಷರ ಕಲಿತುಕೊಂಡು ಎಲ್ಲರಿಗೂ ಹೇಳಿಕೊಡಬೇಕು - ಹಿಂದೂಸ್ಥಾನದಲ್ಲೆಲ್ಲಿ ಹೋದರೂ ಎಲ್ಲರ ಕೂಡ ಮಾತನಾಡಲು ಹಿಂದಿ ಕಲಿತುಕೊಳ್ಳಬೇಕು - ಇಂಗ್ಲೀಷು — ಸಕಲ ದೇಶದಲ್ಲೂ ಸರಸರಾಂತ ಸರಿದಾಡ್ತಿರೋ ಸರ್ಪದಹಾಗಿರುವ ಇಂಗ್ಲೀಷು ಕಲಿತುಕೊಳ್ಳಬೇಕು. ಇವನ್ನೆಲ್ಲಾ ಮಕ್ಕಳು ಮರೀಗೆ ಹೇಳಿಕೊಡಬೇಕು. ಮಕ್ಕಳಿಸ್ಕೂಲ್ ಮನೇಲಲ್ವೇ - ಲಿಲ್ಲೂ —

ಲಿಲ್ಲೂ, ನೀನು ಈ ಊರಿನ ಸುಮಂಗಲೀರ ಸಮಾಜಕ್ಕೆ ಸದಸ್ಯಳಾಗಬೇಕು. ಕನ್ನಡ ತಾಯ ಕಾಲ್ದಡಿ ಕುಳಿತು ಕುಣಿದಾಡಬೇಕು. ಹಿಂದಿ ಕಲಿತು ಮುಂದೆ ಬರುವ ಮಂದಿಗಳಿಗೆಲ್ಲಾ ಮುಂದಾಳಾಗಬೇಕು. ಇಂಗ್ಲೀಷ್ ಕಲಿತು ಡಿಕನ್ಸ್, ಜಾನ್ಸನ್ನು, ಷೇಕ್ಸ್‌ಪಿಯರ್, ಷೆಲ್ಲಿಗಳನ್ನು ನಾಲಿಗೆ ತುದೀಲಿ ಹಾರಿಸುವ ಹಾಗಾಗಬೇಕು.

ಹೀಗೆ ನೋಡಿದರೇ ನೋಡು, ನನ್ನ ಅಂತಸ್ತು, ನನ್ನ ಸ್ಥಾನಮಾನಕ್ಕೆ ಸರಿಯಾದ ಸತಿ ಇತ್ತಿ. ಮುಂಬರುವ ಮಕ್ಕಳಿಗೆ ಮೇಲ್ಪಂಕ್ತಿಯಾಗುತ್ತೀ. ಮಾಡ್ತೀಯೇನೆ?

ಹತ್ತು ವರ್ಷಗಳ ನಂತರ—

ಲೋ ನಿಂಗಾ – ಅಮ್ಮಾವ್ರು ಇನ್ನೂ ಬರಲಿಲ್ಲವೇನೋ – ಸರಿ ನೀನು ಹೊರಡು, ಹನ್ನೊಂದಾಯ್ತು, ಬೇಗ ಬೆಳಿಗ್ಗೆ ಬಂದುಬಿಡು—

ಅಲ್ಲಾ ಆಗಲೇ ಹನ್ನೊಂದು, ಇನ್ನೂ ಲೀಲೂಗೆ ಮನೆಕಡೆ ಮನಸ್ಸೇ ಇಲ್ಲವೇ – ಮಕ್ಕಳು ಮರಿ ವರಿಕೆ ಹೋಗೋದೆ – ದಿನಾಗಲೂ ಇದೇ ಗೋಳೇ – ಈ ಊರಿನ ಲಲನೆಯರ ಲಲ್ಲಿಗೆ ಲಂಗೂ ಲಗಾಮು ಬೇಡ್ವೆ – ಇವತ್ತು, ಇಂಗ್ಲೀಷಿನಲ್ಲಿ ಇಂಪ್ರಾಂಪ್ಟು – ನಾಳೆ ತಂಜಾವೂರಿನ ನಾಗಭದ್ರನ ನಾಗಸ್ವರ, ಸೋಮವಾರ ಸಮಾಜದ ಸಮಿತಿ ಸಭೆ. ಮಂಗಳವಾರ ಮಂಗೇಶರಾಯನ ವ್ಯಾಜಿಕ್ಕು – ಬುಧವಾರ ಭಾಗಮ್ಮನೋರ ಬಂಗಲೆಯಲ್ಲಿ ಭಾರೀಭೋಜನ. ಗುರುವಾರ ಗೋದಾವರೀಬಾಯಿ ಗುಡಾರದಲ್ಲಿ ಗುಲ್ಲೋಗುಲ್ಲು, ಶುಕ್ರವಾರ ಸಮಾಜದಲ್ಲಿ ಶಿಂಗಮ್ಮನೋರ ಸಂಗೀತ, ಶನಿವಾರ ಶಿಶುವಿಹಾರದಲ್ಲಿ ತಾಯಂದಿರ ಗೋಷ್ಠಿ. ಭಾನುವಾರ ಭಗಿನೀಯರೆಲ್ಲಾ ಸೇರಿ ಮಿನರ್ವಾದಲ್ಲಿ ಮಾರ್ನಿಂಗ್ ಷೋ – ಸಾಯಂಕಾಲ ಸಾಗರವೇ ಗತಿ –

ದಿನಾಲೂ ಏನಾದರೂ ಒಂದು ನೆಪಹೇಳಿ ನುಣುಚಿಕೊಂಡುಬಿಡ್ತಾಳೆ – ಕಛೇರಿಯಲ್ಲಿ ಜಬರದಸ್ತಿಮಾಡೋ ನಾನು, ಅವಳ್ಮುಂದೆ ಬಂದ್ರೆ ಮನೇಲಿ, ಜಲ್ಲು ಸುರಿಸ್ತೀನಲ್ಲ ನಾನು, ಇದೇನು ಅನ್ಯಾಯ. ಗಂಡಸರೆದುರಿಗೆ ಗಂಡುಹುಲಿ ಹಾಗೆ ಗುಡುಗೋ ನಾನು, ಹೆಂಡತಿ ಹತ್ತಿರ ಹೆಣ್ಣಿಲಿ ಹಾಗೆ ಹಾಹಾಕಾರ ಹಡ್ತೀನಲ್ಲ! ನನಗೆ ಏನು ಬಂತು!

ಅಲ್ಲಾ! ನನ್ನ ಕೊರಳಿಗೆ ನಾನೇ ಹಾಕಿಕೊಂಡಿದ್ದು ಈ ನೇಣನ್ನ. ಮೊದಲ ಹೇಗಿದ್ದಳು? ಕಛೇರಿಯಿಂದ ಬರುವುದನ್ನೇ ಕಾದಿದ್ದು, ನಗ್ತನಗ್ತ ಮಾತಾಡಿ ಕಾಫಿ ತಿಂಡಿಕೊಟ್ಟು, ಕ್ಲಬ್ಬಿಗೆ ಕಳಿಸ್ತಿದ್ದಳು. ನಾನೇ ಆತ್ಮಹತ್ಯೆ ಮಾಡಿಕೊಂಡಂತೆ ಸಮಾಜಕ್ಕೆ ಸೇರು, ಸೊಸೈಟಿಯಲ್ಲಿ ಸ್ಥಾನಗಳಿಸು, ಮಹಿಳೆಯರಿಗೆ ಮುಂದಾಳಾಗು ಅಂದಿದ್ದೇ ತಪ್ಪು

ಈ ದೊಡ್ಡ ಊರಿಗೆ ಬಂದ್ಮೇಲೆ, ನನ್ನನ್ನು ಕೇಳೋರೆ ಇಲ್ಲ, ಅಂತಸ್ತು ಹೆಚ್ಚಿ ಅಂತ ಆಸ್ಟಿನ್ ಕೊಂಡದ್ದಲ್ಲದೆ, ಧಡಿಯು ಧೊಂಡೋಜೀನೂ ಡ್ರೈವರಾಗಿ ತಗೊಂಡೆ. ಆಫೀಸಿನ ಹೊತ್ತಿಗೆ ಅಮ್ಮಾವ್ರು ಆಸ್ಟಿನ್ ತಗೊಂಡು ಅಬಲೆಯರಾಶ್ರಮಕ್ಕೆ ಹೊರಟುಹೋಗ್ತಾರೆ' ನನಗೆ ನಡಿಗೆಯೇ ಗತಿ.

ಓಹೋ! ಪಟಪಟಾಂತ ಪಠಾಣರ ಚಪ್ಪಲಿ ಹಾಕ್ಕೊಂಡು ಲಿಲ್ಲೂ ಬರ್ತಿದಾಳೇ, ಕೈಲಿರೋ ಕ್ಯಾನ್‌ವಾಸ್ ಕೈ ಚೀಲಾನು ಅಲ್ಲಾಡಿಸ್ಕೊಂಡು ಏಕೆ ಲೀಲೂ ಇಷ್ಟೊತ್ತು ಎಂದರೆ- ಏನ್ಮಹಾ ಇನ್ನೊ ಪಸನ್ನೊಂದು, ಹಿಂದಿನ ಹತ್ತು ಗಂಟೆ ಅಂತ ಆರವಿಂದ ಆಗಲಮಾಡಿ ಅಣಕಿಸಿ ಓಡಿ ಹೋಗ್ತಾಳೆ.

ಅಯ್ಯೋ ದೇವರೇ ಪುರಂದರ ಪಾಹಿ ಪರಮಾತ್ಮ. ನನಗೆ ಬುದ್ಧಿ ಈಗ ಕೊಟ್ಟ ಹಾಗೆ....ಇವಳಿಗೆ ಎಂದು ಕೊಡ್ತೀಯಪ್ಪಾ!

—ಡಿ. ಎನ್. ಸೀ.



“ ನಿಂಮ್ದೆ ಕಾಯಿ ಬೋಣಿ ......ತೆಗೊಳ್ಳಿ........ಒಂದೇ ಒಂದು ಇರೋದು ಈ ಪ್ಯಾಟ್ರನ್........

ಅನರ್ಥಕೋಶ

ಪಟ್ಟಣ : ಇಲ್ಲಿಯ 'ಬಹಿರಂಗ'ದಲ್ಲಿ 'ಮುನಿಸಿಪಾಲಿಟಿ' ಎಂಬ 'ಯಕ್ಷಗಾನ'ವನ್ನಾಡುತ್ತಾರೆ.

ಪತಿ : ಮನೆ ಮೂಲೆಯಲ್ಲಿ ಕೂತಿರುವ ದೇವರು.

ಪರದಾ : ಇನ್ನೂ ಅನೇಕ ಮಹಿಳೆಯರು ಆಚರಿಸಬಹುದಾದ ಪದ್ಧತಿ

ಪರಾರಿ : ಶತ್ರುವಿನ ಶತ್ರು; ಅಂದರೆ, ನಮ್ಮ ಮಿತ್ರ

ಪರಿಚಿತಸ್ಥ : ನಾವು ಸಾಲಕೇಳಬಹುದಾದ, ಆದರೆ, ನಾವು ಸಾಲ ಕೊಡಬಾರದ —ಒಂದು ವ್ಯಕ್ತಿ

ಪರಿಷತ್ತು : ಇದರ ಉಪಾಧ್ಯಕ್ಷನು ಎಲ್ಲ ಕನ್ನಡಿಗರ ಬೈಗಳನ್ನೂ ತಿಂದು ಜೀರ್ಣಿಸಿಕೊಳ್ಳಬೇಕೆಂಬ ನಿಯಮವಿದೆ.

ಪರಿಹಾಸ : ನಮಗಾಗದವನಿಗೆ ನಾವು ಮಾಡುವ ಮರ್ಯಾದೆ.

ಪಾಠ : ಕಂಠಶೋಷಣೆಯಿಂದ ಕಂಠಪೂರ್ತಿಮಾಡಲು ಯತ್ನಿಸುವವರ ಕಂಠಾಃಶೋಷ

ಪಾಣಿಗ್ರಹಣ : 'ಬೆರಳು ತೋರಿಸಿದರೆ ಹಸ್ತ ನುಂಗುತ್ತಾಳೆ' ಎಂಬುದನ್ನು ನೋಡಿ

ಪಾರಾಯಣ : ಇಸ್ಪೀಟು ಆಟ

ಪಾಲು : ಇದಾದ ಕೆಲವು ಕ್ಷಣಗಳಲ್ಲೇ—'ಪೋಲು.'

ಪಾಸು : ಕಾಲೇಜಿಂದ ತಪ್ಪಿಸಿಕೊಂಡು ಹೋಗಲು ಹಲವರು ಹೂಡುವ ಪಿತೂರಿ

ಪಾಶ್ಚಾತ್ಯರು : ಲೋಕೋದ್ಧಾರಕ್ಕಾಗಿ ಅವತಾರಮಾಡಿರುವ ಶ್ವೇತಚರ್ಮಾಂಬರರು

ಪೀಠ : ಇದಕ್ಕೆ ಈಗ ಸೀಟ ಎನ್ನುತ್ತಾರೆ

ಪುರಂದರದಾಸ : 'ತಸ್ಯವಿತ್ತಂಹರಾಮ್ಯಹಂ' ಎಂಬುದಕ್ಕೆ ನಿದರ್ಶನ.

ಪಂಕ್ತಿಲಾಭ : ತಮ್ಮ ಅನಾಚಾರಕ್ಕೆ ಆಧಾರವಾಗಿ ಹೇಳಬಹುದಾದ ಪಂಕ್ತಿ ಸಿಕ್ಕರೆ ......

ಪಂಚಾಂಗ : ಚತುರಂಗಬಲಕ್ಕೆ ಸಹಾಯವಾಗಿ ಶತ್ರುಜನರಲ್ಲಿ ಭೀತಿಯನ್ನು ಬಿತ್ತುವ ನಮ್ಮವರು.... Fifth column

ಪಂಡಿತ : ಮಗನಿಂದ ಪ್ರಖ್ಯಾತಿಗೆ ಬಂದ ಪಿತೃಃ

ಪಂಪ : ಕಾಗದದ ಅಭಾವದ ಕಾಲದಲ್ಲಿ ಕನ್ನಡಿಗರು ಇಟ್ಟುಕೊಳ್ಳುತ್ತಿದ್ದ ಒಂದು ಹೆಸರು.

ಪಂಪು : ಬೆಂಗಳೂರು ಮೈಸೂರು ನಗರಗಳಲ್ಲಿ ಅನೇಕಕಡೆ ಇದನ್ನಿಟ್ಟು, ಭೂಮಿಯೊಳಗಿಂದ ಪೆಟ್ರೋಲನ್ನು ತೆಗೆಯುತ್ತಾರೆ.

ಪ್ರಾಚೀನಾವೀಥಿ : ಬಲದಿಂದ ಎಡಕ್ಕೆ ಹೋಗುವ ಬೀದಿ.

ಫೋಟೊ : ಮುಖ ತೋರಿಸಿ ಮೂದೇವಿ ಅನ್ನಿಸಿಕೊಂಡ"—ಎಂಬ ಗಾದೆಯನ್ನು ನೋಡಿ

—ಶಾರಾಂಶ.

ನನ್ನರ್ಧನಾರೀಶ್ವರತ್ವ

ಏನು ಗ್ರಹಚಾರ ಸ್ವಾಮಿ ಇದು !… …ಕಣ್ಣು, ಮೂಗು, ಕೈಕಾಲುಗಳೆಲ್ಲ ಸರಿಯಾಗಿದ್ದರೂ, ತಲೆಯೆತ್ತಿ ತಿರುಗದಂತೆ ಮಾಡಿಬಿಟ್ಟಿದೆ. ಒಬ್ಬೊಬ್ಬರಿಗೆ ಒಂದೊಂದು ರೀತಿ ಕಷ್ಟ ಬರುತ್ತೆ, ನಿಜ! ಆದರೆ ನನ್ನದೇ ಒಂದು ರೀತಿ…….

ಈಚೀಚೆಗಂತೂ ಮುಖದಮುಂದೆ ಕನ್ನಡಿ ತರುವುದಕ್ಕೇ ಗಾಬರಿಯಾಗುತ್ತೆ! ಭೂಮಿ ಬಾಯಿಬಿಟ್ಟು ನುಂಗಬಾರದೆ ಅನ್ನಿಸುತ್ತೆ ಒಂದೊಂದು ಸಲ. ಯಾರಾರನ್ನೋ ಕೇಳಿದೆ, ಎಲ್ಲೆಲ್ಲೋ ವಿಚಾರಿಸಿದೆ…… ಉಹುಂ! ಈ ಸಂಕಟದಿಂದ ಪಾರಾಗುವುದು ಹೇಗೆಂಬು ಇದುವರೆಗೆ ಒಬ್ಬರಾದರೂ ಹೇಳಬೇಕಲ್ಲ !

ಅದೇನು ಪ್ರಾರಬ್ಧಕರ್ಮವೋ ನನ್ನದು! ಎಲ್ಲರಿಗೂ ಬರುವಂತೆ ಪೂರಾ ಮೀಸೆ ಬರಕೂಡದಾಗಿತ್ತೆ ? ಇಲ್ಲವೇ ಇಲ್ಲ! ಅರ್ಧನಾರೀಶ್ವರನ ಹಾಗೆ ಅರ್ಧ ಭಾಗದಲ್ಲಿ ಮಾತ್ರ, ಅಂದರೆ ಎಡಭಾಗದಲ್ಲಿ ಮಾತ್ರ ಮೀಸೆ ಕಾಣಿಸಿಕೊಂಡು ಬಿಟ್ಟಿದೆ. ಪೋಷಿಸಿದಷ್ಟೂ ಸೊಂಪಾಗಿ ಬೆಳೆಯುತ್ತಿದೆಯೋ ಹೊರತು, ಕಮ್ಮಿಯಾಗುವ ಸೂಚನೆಯೇ ಇಲ್ಲ ಇದುವರೆಗೆ! ಆದರೆ ಬಲಭಾಗವೆಲ್ಲ ಖಾಲಿ!! ಹಾಗೆಯೇ ಕೈಯಾಡಿಸಿ, ಮುಟ್ಟಿ ನೋಡಿಕೊಂಡರೆ ದುಃಖವಾಗುತ್ತೆ, ಕೋಪ ಬರುತ್ತೆ……ಕೆಲವು ಸಲ ಮಹಾರಾಣೀ ಕಾಲೇಜಿನ ಜ್ಞಾಪಕ ಬರುತ್ತೆ. ಈ ಅನಿಷ್ಟ ಸಹವಾಸದಿಂದ ಮತ್ತೇನೂ ಸುಖವಿಲ್ಲ ಇದುವರೆಗೆ.

ಹಾಳಾಗಿ ಹೋಗಲಿ ಸುಮ್ಮನಿರೋಣವೆಂದರೆ, ದಿನ ಬೆಳಗಾಗುವುದೇ ತಡ, ನೆರೆಹೊರೆಯ ಹುಡುಗರೆಲ್ಲ "ಗೆಡ್ಡಿ ಮೀಸೆ! ಎಂತ ತಮಾಷೆ!" ಎಂದು ಪ್ರಾಸ್ಯ (ಪ್ರಾಸ ಸಮೇತ ಹಾಸ್ಯ) ಮಾಡಲು ಪ್ರಾರಂಭ! ಮನೆಬಿಟ್ಟು ಹೊರಗೆ ಹೊರಟರೆ ಸರ್ಕಸ್ ಕಂಪೆನಿಯವರು, ರಾಸ್ ಬಂಗ್ಲೆಯವರು, ಫೋಟೋಗ್ರಾಫರುಗಳು ಇವರಿಂದ ತಪ್ಪಿಸಿಕೊಳ್ಳುವ ಹೊತ್ತಿಗೇ ಸಾಕು ಸಾಕಾಗಿ ಹೋಗುತ್ತೆ !

ಈ ಅವಲಕ್ಷಣವನ್ನು ಮುಚ್ಚಲು ನಾನೆಷ್ಟು ಯತ್ನಿಸಿದರೂ ಕಡೆಗೂ ನಮ್ಮಜ್ಜಿ ಕಂಡೇಬಿಟ್ಟಳು! "ಮುಂಡೇದಕ್ಕೆ ಮೂಗಿನ ಕೆಳಗೇ ಅವಲಕ್ಷಣ" ಎಂದು ಶಪಿಸಿ, "ಹೋಗಲಿ, ಶುಂಠಿಯನ್ನು ತುಪ್ಪದಲ್ಲಿ ತೇದು ಬಲಭಾಗಕ್ಕೆ ಹಚ್ಚು, ಕೂದಲು ಬೆಳೆಯುತ್ತೆ" ಎಂದು ಸಲಹೆಕೊಟ್ಟರು. 'ಹೊಟ್ಟೆಗೆ ಹಿಟ್ಟಿಲ್ಲ, ಮೀಸೆಗೆ ತುಪ್ಪ ಹಚ್ಚಿದ' ಎಂಬ ಗಾದೆಯಂತೆ ನಾನೂ ಹಚ್ಚಬೇಕಾಯಿತು! ಆದರೆ ನಿಷ್ಪ್ರಯೋಜನ!

ಸ್ವಪ್ರಯತ್ನವೇ ಮೇಲೆಂದು ನಾನೇ ಮುಂದೆ ನುಗ್ಗಿದೆ. ಕಂಡ ನಾಲ್ಕು ಜನರನ್ನ ಇದಕ್ಕೇನುಪಾಯವೆಂದು ಕೇಳಿದೆ. ಅವರವರಿಗೆ ಹಾಕಿದೆ ಸಲಾಮು.

ಅವರು ಕೊಟ್ಟರು ಮುಲಾಮು! ಆದರೆ ಮುಲಾಮಿನ ಡಬ್ಬಿಗಳೆಲ್ಲ ನನ್ನ ಮೀಸೆಯ ಬಲಾರ್ಧದಂತಾದುದರ ಹೊರತು ಮತ್ತೇನೂ ಗಿಟ್ಟಲಿಲ್ಲ!

ಬಳಿಕ ಪಂಡಿತರು, ಹಕೀಮರು, ಆಯುರ್ವೇದ ವಿಶಾರದರು, ಮಂತ್ರವಾದಿಗಳು, ತಂತ್ರಶೂರರು, ತಾಯಿತಿ ಕಟ್ಟುವವರು ಇತ್ಯಾದಿ ಇತ್ಯಾದಿ ಎಲ್ಲರೂ ಒಂದೊಂದು ಕೈನೋಡಲು ಬಂದು, ಎರಡೆರಡು ಕೈಗಳನ್ನು ಜೋಡಿಸಿ ನಮಸ್ಕಾರ ಹೇಳಿದರು!

ಕಡೆಗೊಬ್ಬ 'ಅತಿಬುದ್ಧಿ'ಯವರು ಸೂಚಿಸಿದರು. "ಏನೋ ಕಾರಣದಿಂದ ನಿನ್ನ ಬಲಾರ್ಧದಲ್ಲಿ ಮೀಸೆ ಬೆಳೆಯದೆ ಇದೆ. ಅದನ್ನು ವಿಚಾರಿಸಿ ಎಡಭಾಗಕ್ಕೂ ಹಾಗೆಯೇ ಮಾಡಿಸು" ಎಂದರು! ಮಹಾತ್ಮಾ! ಭೇಷ್! ಎಂದು ತಕ್ಷಣ ಅಜ್ಜಿಯ ಬಳಿಗೆ ಹೋದೆ. ಅವಳು "ಏನೋಪ್ಪ! ನೀನು ತೀರ ಚಿಕ್ಕವನಿದ್ದು ಮಲಗಿ ನಿದ್ರಿಸುತ್ತಿದ್ದಾಗ ಒಂದು ಹಲ್ಲಿ ಬಲಭಾಗದಲ್ಲಿ......." ಎಂದು ಹೇಳುತ್ತಿದ್ದಾಗಲೇ ನಾನು ಥಣ್ಣಗಾದೆ!

ಆವರಿವರನ್ನು ಕೇಳಿ ಮೂರ್ಖಾಳಾಗುವುದು ಬೇಡ! ಏನು, ಪೇಪರಿಲ್ಲವೆ? ಜಾಹೀರಾತು ಕೊಟ್ಟರಾಯಿತು, ಪ್ರಪಂಚದ ಮೂಲೆಮೂಲೆಗೂ ಮುಟ್ಟುತ್ತೆ, ಎಂದು ನನ್ನ ಫೋಟೋವನ್ನೂ, ಸಂಕಟದ ವಿವರವನ್ನೂ, ನಿವಾರಿಸಿದವರಿಗೆ ಸಾವಿರ ರೂಪಾಯಿ ಬಹುಮಾನವನ್ನೂ ಪ್ರಕಟಿಸಿದೆ!

ಒಂದು ತಿಂಗಳಾದಮೇಲೆ ಉತ್ತರಗಳು ಬರಲು ಪ್ರಾರಂಭವಾದುವು! ಇಂಗ್ಲೆಂಡಿನ ತಮಾಷೆ ಬಂಗಲೆಯವರು 'ನಮ್ಮಲ್ಲಿಗೆ ಬನ್ನಿ' ಎಂದು ಆಹ್ವಾನ ಕಳುಹಿಸಿದರು! ಜರ್ಮನಿಯ ವೈಜ್ಞಾನಿಕ ಸಂಶೋಧನ ಸಂಘವೊಂದು "ನಿಮ್ಮ ಮೀಸೆಯ ವಿಚಾರ ಸಂಶೋಧನ ನಡೆಸಲು ಆತುರರಾಗಿದ್ದೇವೆ. ಖಂಡಿತ ಮೀಸೆ ಸಮೇತ ಬಿಜಯಂಗೈಯಿರಿ" ಎಂದು ಆಮಂತ್ರಣವಿತ್ತಿತು! ಜಪಾನಿನ ಕೈಗಾರಿಕೆ ಕೇಂದ್ರದಿಂದ "ನಿಮ್ಮ ಮೀಸೆಯ ಕಾಪಿರೈಟನ್ನು ಖಂಡಿತ ನಮಗೇ ಕೊಡಬೇಕು; ಸರಿಯಾದ ಪ್ರೋತ್ಸಾಹ ಸಿಕ್ಕಿದರೆ ನಾವೂ ಸಾವಿರಗಟ್ಟಲೆಯಾಗಿ ಅನುಕರಣೆ ಮಾಡಲು ನಿರ್ಧರಿಸಿದ್ದೇವೆ" ಎಂದು ಗೋಗರೆದರು. ಹಾಲಿವುಡ್ಡಿನ ಚಿತ್ರನಿರ್ದೇಶಕರು "ನಿಮ್ಮ ಫೋಟೋ ನೋಡಿದಾಗಿನಿಂದ ನಮ್ಮ ನಟಿಯರೆಲ್ಲ ನಿಮ್ಮೊಂದಿಗೆ ಹಾಡಿ ಕುಣಿಯಲು ಹಾತೊರೆಯುತ್ತಿದ್ದಾರೆ! ಬೇಗಬನ್ನಿ! ಓಡಿಬನ್ನಿ!" ಎಂದು ಬರೆದರು! ಮತ್ತಾವುದೋ ಒಂದು ಅಮೆರಿಕದ ಸಂಘದಿಂದ "ನೀವು ಸತ್ತಮೇಲೆ ನಿಮ್ಮ ಬುರಡೆಯನ್ನು ನಮಗೇ ಕಳುಹಿಸಬೇಕು" ಎಂದು ಬರೆದು ಇನ್ನೂ ಜೀವಂತವಾಗಿದ್ದಾರೆ!

ಜಾಹೀರಾತಿನಿಂದ ಈ ರೀತಿಯಾದಮೇಲೆ, ಇನ್ನೇನು ಅದರ ಆಸೆ ಬಿಟ್ಟುಬಿಡೋಣವೆಂದಿದ್ದೆ. ಅಷ್ಟರಲ್ಲಿ ಒಂದುದಿನ ಪೇಪರಿನಲ್ಲಿ "ಅನೇಕನರ ಹೊಸ

ಸಂಶೋಧನ! ' ಹೇರ್‍ಗ್ಯಾನ್ ' ಇಂಜಕ್ಷ್ಗ. ಯಾವ ಜಾಗದಲ್ಲಿ ಕೊಟ್ಟರೆ, ಆ ಜಾಗ ದಲ್ಲಿ ಕೂದಲು ಬೇರು ಸಹಿತ ನಾಶವಾಗುತ್ತೆ! ಮತ್ತೆ ಏನುಮಾಡಿದರೂ ಬೆಳೆಯು ವುದಿಲ್ಲ!'' ಎಂದಿತ್ತು. ನಾನು ಆತುರದಿಂದ ಡಾ|| ಸರ್ಜನ್‌ರವರ ಬಳಿಗೆಹೋಗಿ, ನೂರಾರು ರೂಪಾಯಿ ಖರ್ಚುಮಾಡಿ ಇಂಜಕ್ಷ್ಗ ತೆಗೆದುಕೊಂಡೆ. ಅವರು ಹೇಳಿ ದರು'' ಇದು ಸ್ವಲ್ಪ ನಿಧಾನವಾಗಿ ಪರಿಣಾಮಕಾರಿಯಾಗುತ್ತೆ, ಒಂದು ವರ್ಷದ ವರೆಗೂ ಕಾಯಬೇಕಾಗುತ್ತೆ'' ಎಂದು.

ಕಾದೆ! ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕುವರ್ಷ ಕಾದರೂ ಜಪ್ಪಯ್ಯ ಎನ್ನಲಿಲ್ಲ ಆ ಬ್ರಾಹ್ಮಣಮೀಸೆ! ಅದರ ಆಸೆ ಬಿಟ್ಟೆ.

ಇದೆಲ್ಲ ಆದಮೇಲೆ ಒಂದುದಿನ ಪೇಪರಿನಲ್ಲಿ ಮತ್ತೊಂದು 'ಬಿಸಿಬಿಸಿ' ಇತ್ತು "ಹೊಸದೊಂದು ಜರ್ಮನ್ 'ಆಪರೇಶನ್'! ಇದನ್ನು ನಡೆಸಿದರೆ, ಬೋಳಾಗಿರುವ ಸ್ಥಳದಲ್ಲಿ ಕೂಡ, ಹೊರವಾಗಿ ಕೂದಲು ಬೆಳೆಯುತ್ತೆ. ಆಮೇಲೆ ನೀವು ಜೀವಿಸಿರುವವರೆಗೂ ಭಯವಿಲ್ಲ. ಸತ್ತಮೇಲೂ ಭಯವಿಲ್ಲ!" ಎಂದಿತ್ತು! ಹಾಗಾಗದಿದ್ದಲ್ಲಿ ಹತ್ತುಸಾವಿರ ರೂಪಾಯಿ ಬಹುಮಾನ ಕೊಡುವುದಾಗಿಯೂ ತಿಳಿಸಿತ್ತು.

ಹೋಗಲಿ, ಬಹುಮಾನವಾದರೂ ಗಿಟ್ಟಿತಲ್ಲ! ಎಂಬ ಧೈರ್ಯದಿಂದ ನನ್ನ ಬಲಮೀಸೆಯ ಜಾಗದಲ್ಲಿ ಆಪರೇಶನ್ 'ಮಾಡಿಸಿಕೊಂಡೆ! ತಕ್ಷಣ, ಏನು ನನ್ನ ಅದೃಷ್ಟ! ಮೀಸೆ ಬರಲು ಪ್ರಾರಂಭವಾಯ್ತು! ಕುಡಿಮೀಸೆ ಶುರುವಾಗಿ, ಬಲಿತು, ಹೊರವಾಗಿ ಬೆಳೆಯಿ (ಹತ್ತಿತು). ವೆಂಕಟರಮಣಸ್ವಾಮಿಗೆ ತೆಂಗಿನಕಾಯಿ ಗಳನ್ನೂ ಅರ್ಪಿಸಿದೆ. (ಆಗಿನ್ನೂ ಯುದ್ಧ ಶುರುವಾಗಿರಲಿಲ್ಲ!)

ಎರಡು ಮೀಸೆಗಳೂ ಲಕ್ಷಣವಾಗಿ ಬೆಳೆಯತೊಡಗಿದುವು. ಕಳೆದ ಐದಾರು ವರ್ಷಗಳಿಂದ ನನ್ನ ಸಂತೋಷವೇ ಸಂತೋಷ! ಮೊದಮೊದಲು ಅಜ್ಜಿಗೆ ಕೂಡ ಗುರುತು ಸಿಕ್ಕಲಿಲ್ಲ! ಸ್ನೇಹಿತರಿಗೆಲ್ಲ ಇದೊಂದು ಆಶ್ಚರ್ಯವಾಗಿತ್ತು! ನನಗೂ ಮತ್ತೇನೂ ಬೇಕಿಲ್ಲವೆನ್ನಿಸಿತ್ತು........


ಆದರೆ...........ಏನು ಗ್ರಹಚಾರರೀ ಇದು? ಹತ್ತು ವರ್ಷದ ಹಿಂದೆ ಕೊಟ್ಟ "ಹೇರ್‍ಗ್ಯಾನ್" ಇಂಜಕ್ಷ್ಗ ಇಂದು ಫಲಕಾರಿಯಾಗಬೇಕೆ? ಎಡಭಾಗದ ಮೀಸೆ ಸ್ವಲ್ಪಸ್ವಲ್ಪವಾಗಿ ನಾಶವಾಗುತ್ತ ಬಂದು, ಕಡೆಗೆ ಪೂರ್ತ ಬೋಳಾಗಿ ಹೋಗಿದೆ! ಮತ್ತೆ ಮೊದಲಿನ ಅವಸ್ಥೆಯಾಗಿ ಹೋಗಿದೆ!....... ಈ ಅನಾಹುತ ಇಷ್ಟಕ್ಕೇ ಆಗಲಿಲ್ಲ, ಜಾಹೀರಾತು ನಿಜವಾದರೆ "ಆ ಜಾಗದಲ್ಲಿ ಮತ್ತೆ ಏನುಮಾಡಿದರೂ ಕೂದಲು ಬೆಳೆಯುವುದಿಲ್ಲ" ವಂತೆ!!

ನೀನಾದರೂ ಏನಾದರೂ ಮಾಡಿ ಈ ಸಂಕಟದಿಂದ ನನ್ನನ್ನು ಪಾರುಮಾಡಿಸಿ ಸ್ವಾಮಿ!

—ಬಿ. ವಿ. ಸು.

ಎಲ್ಲವನ್ನೂ ಮೀರಿಸುವ ಸುಂದರ ಆಕಾರ
ಆಶ್ಚರ್ಯಕರವಾದ ಬಾಳಿಕೆ

ಮೈಸೂರೈಟ್ ಅಚ್ಚಿನ ಸಾಮಾನುಗಳ ಅನೇಕ ಅನುಕೂಲಗಳೂ ಹಾಗೂ ಉತ್ತಮ ಗುಣಗಳೂ ದಿನದಿನವೂ ಜನಪ್ರಿಯವಾಗುತ್ತಿವೆ.



ಸುಂದರ ಆಕಾರವೂ ಮತ್ತು ಗಡುತರ ತಯಾರಿಕೆಯು ಅವನ್ನು ಎಲ್ಲಾ ವಿಧವಾದ ಕೆಲಸಗಳಿಗೂ ಬಳಸಲು ನಂಬಿಕೆಯನ್ನುಂಟುಮಾಡುತ್ತಿವೆ.


ಮೈಸೂರೈಟ್

ಅಚ್ಚಿನ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಬೆಂಗಳೂರು.


Toilet
Soap


SMALL TOOLS
SMALL
TOOLS
OF
QUALITY
TRADES
121, SULTAN PET BANGALORE CITY



Printed by B. S. Iyengar, Bangalore City.
Publisher—B. N. Gupta, Editor—M. Shivaram.